ವಿಜಯಪುರ | ಸಂಪುಟ 02 | ಸಂಚಿಕೆ 181 | ಪುಟ 4 | ₹ 3.00
https://udayarashminews.com
udayarashmi 90088 88340

# ಉದಯ ರಶ್ಮಿ

Udayarashmi Kannada Daily
ಜನಪರ-ಜೀವಪರ
ಕನ್ನಡ ದಿನಪತ್ರಿಕೆ
ಸಂಪಾದಕ : ಇಂದುಶೇಖರ ಮಣೂರ
Editor: Indushekhar Manur
editor.udayarashmi@gmail.com RNI NO: KARKAN/2023/86203 ಬುಧವಾರ, ಸೆಪ್ಟೆಂಬರ್ 11, 2024

"ಕಾಂಗ್ರೆಸ್ ಪಕ್ಷದ ಸಂಪ್ರದಾಯದಲ್ಲಿ ಪಲ್ಲಕ್ಕಿ ಹೊರುವವರೇ ಬೇರೆ, ಉತ್ಸವ ಮೂರ್ತಿ ಆಗುವವರೇ ಬೇರೆ. ಜೀವನವೆಲ್ಲಾ ಕಾಂಗ್ರೆಸ್ ಪಕ್ಷದ ಪಲ್ಲಕ್ಕಿ ಹೊತ್ತು ಕಡೆಗೆ ಮೂಲೆ ಗುಂಪಾದವರ ಪಟ್ಟಿ ಬಹಳ ದೊಡ್ಡದಿದೆ."



» - ಆರ್.ಅಶೋಕ್
ವಿಧಾನಸಭೆ ವಿರೋಧ ಪಕ್ಷದ ನಾಯಕ

## ಮಕ್ಕಳ ಶಿಕ್ಷಣಕ್ಕೆ ಪಾಲಕರು ಸಮಯ ಕೊಡಬೇಕು :ನಾಯಕ




ಬಸವನ ಬಾಗೇವಾಡಿ: ಇಂದು ಶಿಕ್ಷಣ ತನ್ನ ಹಿಡಿತ ಕಳೆದುಕೊಳ್ಳುತ್ತಿರುವ ಕಾಲಘಟ್ಟದಲ್ಲಿ ಮಕ್ಕಳ ಶಿಕ್ಷಣಕ್ಕೆ ಪಾಲಕರು ದಿನದ ಒಂದಿಷ್ಟು ಸಮಯವನ್ನು ಕೊಡಬೇಕು. ಮಕ್ಕಳಲ್ಲಿ ಮೌಲ್ಯಗಳನ್ನು ತುಂಬುವಲ್ಲಿ ಪಾಲಕರು ಸಹ ಶಿಕ್ಷಕರ ಜೊತೆ ಕೈ ಜೋಡಿಸಬೇಕೆಂದು ಶಿಕ್ಷಕ ಬಾಬು ನಾಯಕ ಹೇಳಿದರು. ಪಟ್ಟಣದ ಬಿ. ಎಲ್. ಡಿ. ಇ. ಸಂಸ್ಥೆಯ ಪಿ. ಯು. ಕಾಲೇಜಿನಲ್ಲಿ ಜರುಗಿದ ಪಾಲಕರ ಸಭೆಯಲ್ಲಿ ಪಾಲಕರ ಪ್ರತಿನಿಧಿಯಾಗಿ ಪಾಲ್ಗೊಂಡು ಮಾತನಾಡಿದ ಅವರು, ಮಕ್ಕಳ ಭವಿಷ್ಯ ರೂಪಿಸುವಲ್ಲಿ ಪಾಲಕರು ತಮ್ಮ ಕೆಲಸ ಕಾರ್ಯಗಳನ್ನು ಬದಿಗೊತ್ತಿ ಮಕ್ಕಳಿಗಾಗಿ ಸಮಯ ಮತ್ತು ಬದುಕನ್ನು ಮಿಸಲಿಡಬೇಕು. ಪ್ರತಿಯೊಬ್ಬ ಮಗುವಿಗೂ ಕುಟುಂಬದ ಕಷ್ಟವನ್ನು ಮನವರಿಕೆ ಮಾಡಿಕೊಡ ಬೇಕೆಂದು ಅಭಿಪ್ರಾಯಪಟ್ಟರು.

ಪದವಿ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಎ. ವಿ. ಸೂರ್ಯವಂಶಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು, ಮಕ್ಕಳನ್ನು ಕಲಿಕೆಯ ಜೊತೆಗೆ ಕ್ರೀಡಾ ಮನೋಭಾವವನ್ನು ಬೆಳೆಸಿದಾಗ ಮಾತ್ರ ಮಕ್ಕಳು ಸಾರ್ವತ್ರಿಕವಾಗಿ ಬೆಳವಣಿಗೆ ಹೊಂದಲು ಸಾಧ್ಯವೆಂದು ಅಭಿಪ್ರಾಯಪಟ್ಟರು. ಪ್ರೊ. ಎಂ. ಕೆ. ಯಾದವ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಾಚಾರ್ಯ ಆರ್. ಎ. ಪವಾರ ಅಧ್ಯಕ್ಷತೆ ವಹಿಸಿದ್ದರು. ವಾಣಿಜ್ಯ ಮತ್ತು ವಿಜ್ಞಾನ ವಿಭಾಗದ ಎಲ್ಲ ಶಿಕ್ಷಕರು ಹಾಜರಿದ್ದರು.

### ರಾಜಕೀಯ ವಲಯದಲ್ಲಿ ಕುತೂಹಲ ಸೃಷ್ಟಿಸಿದ ಹೇಳಿಕೆ | ಅಭಿಮಾನಿಗಳಿಂದ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್

## 2028ಕ್ಕೆ ನಾನೇ ಕರ್ನಾಟಕ ಸಿಎಂ :ಸಚಿವ ಜಾರಕಿಹೊಳಿ

ಬೆಂಗಳೂರು: ಕೈ ಪಾಳಯದಲ್ಲಿ ಸಿಎಂ ಕುರ್ಚಿಗಾಗಿ ಕಾದಾಟ ದಿನದಿಂದ ದಿನಕ್ಕೆ ತಾರಕ್ಕೇರುತ್ತಿದೆ. ಪಕ್ಷದ ಹಿರಿಯರು ಹಾಗೂ ಅನುಭವಸ್ಥರ ನಡುವೆ ಪೈಪೋಟಿ ಶುರುವಾಗಿದೆ. ಎಂಬಿ.ಪಾಟೀಲ್, ಪರಮೇಶ್ವರ್ ಬಳಿಕ ಇದೀಗ ಸಿಎಂ ರೇಸ್ ನಲ್ಲಿ ಸತೀಶ್ ಜಾರಕಿಹೊಳಿಯವರ ಹೆಸರು ಕೂಡ ಕೇಳಿ ಬರುತ್ತಿದೆ.

ಮುಡಾ ಹಗರಣದಲ್ಲಿ ಸಿಎಂ ಸಿದ್ದರಾಮಯ್ಯ ರಾಜೀನಾಮೆ ಕೊಡುವ ಸಂದರ್ಭ ಬಂದರೆ ಮುಂದಿನ ಸಿಎಂ ಯಾರು ಎನ್ನುವ ಚರ್ಚೆಗಳು ಹುಟ್ಟಿಕೊಂಡಿವೆ. ಇದರ ಬೆನ್ನಲ್ಲೆ ಸತೀಶ್ ಜಾರಕಿಹೊಳಿ ಹೆಸರನ್ನು ಅಭಿಮಾನಿಗಳು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿ ವೈರಲ್ ಮಾಡುತ್ತಿದ್ದಾರೆ.

ಇದೇವೇಳೆ ಸತೀಶ್ ಜಾರಕಿಹೊಳಿಯವರು ದೆಹಲಿಯಲ್ಲಿ ರಾಹುಲ್ ಗಾಂಧಿಯವರನ್ನು ಭೇಟಿ ಮಾಡಿದ್ದು, ಸಿಎಂ ಕುರ್ಚಿ ಲಾಬಿ ಕುರಿತ ಅನುಮಾನಗಳು ಹೆಚ್ಚಾಗುವಂತೆ ಮಾಡಿದೆ.




ಬೆಳಗಾವಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿರುವ ಸತೀಶ್ ಜಾರಕಿಹೊಳಿಯವರು, ಸಿದ್ದರಾಮಯ್ಯ ಅವರೇ ಸಿಎಂ ಆಗಿ ಮುಂದುವರೆಯುತ್ತಾರೆ. ಇದಕ್ಕಾಗಿ ಗುದ್ದಾಟ, ಕುಸ್ತಿ ಮಾಡೋ ಅವಶ್ಯಕತೆ ಇಲ್ಲ. ಅನೇಕರು ತಮ್ಮ ಆಸೆಯನ್ನು ವ್ಯಕ್ತಪಡಿಸಿದ್ದಾರೆ. ಸದ್ಯಕ್ಕೆ ಸಿಎಂ ಸ್ಥಾನ ಖಾಲಿ ಇಲ್ಲ. 2028ಕ್ಕೆ ಸಿಎಂ ಆಗುವ ತಯಾರಿ ಇದೆ ನಮ್ಮದು. ಅಲ್ಲಿಯವರೆಗೆ ಅಭಿಮಾನಿಗಳು ಕಾಯಬೇಕು. ನಾನು ಸಿಎಂ ಆಗುವ ವಿಚಾರದ ಬಗ್ಗೆ ಮುಂದೆ ನೋಡೋಣ. 2028ಕ್ಕೆ ಈ ವಿಚಾರದ ಬಗ್ಗೆ ನೋಡೋಣ ಎಂದು ಹೇಳಿದರು.

ಸಿಎಂ ಆಗಿ ಸಿದ್ದರಾಮಯ್ಯ ಅವರೇ ಮುಂದುವರೆಯುತ್ತಾರೆ. ಅಲ್ಲದೆ ಆರ್‌ವಿ ದೇಶಪಾಂಡೆ, ಪರಮೇಶ್ವರ್, ಡಿಕೆ ಶಿವಕುಮಾರ್, ಎಂಬಿ ಪಾಟೀಲ್, ಶಿವಾನಂದ ಪಾಟೀಲ್ ಹಿರಿಯರಿದ್ದಾರೆ. ಎಲ್ಲರಿಗೂ ಸಿಎಂ ಆಗುವ ಆಸೆ ಇದ್ದೇ ಇರುತ್ತದೆ. ಹೀಗಾಗಿ ಸದ್ಯ ಈ ಪ್ರಶ್ನೆ ಉದ್ಭವಿಸಲ್ಲ. ಮುಂದೆ ನೋಡೋಣ ಎಂದು ತಿಳಿಸಿದರು.

ರಾಜ್ಯಪಾಲರು ತಮ್ಮ ಪ್ರಾಸಿಕ್ಯೂಷನ್‌ಗೆ ಒಪ್ಪಿಗೆ ನೀಡಿದರೆ, ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು ಎಂದು ಕಾನೂನಿನಲ್ಲಿ ಹೇಳಿಲ್ಲ. ಮುಡಾ ಹಗರಣದಲ್ಲಿ ಸಿದ್ದರಾಮಯ್ಯ ಪರ ನ್ಯಾಯ ಸಿಗುತ್ತದೆ ಎನ್ನುವ ನಂಬಿಕೆ ಇದೆ. ಸಿದ್ದರಾಮಯ್ಯ ನೇತೃತ್ವದಲ್ಲಿ ರಾಜ್ಯದಲ್ಲಿ ಮುಂದಿನ ದಿನಗಳಲ್ಲಿ ಸರ್ಕಾರ ಪರಿಣಾಮ ಕಾರಿಯಾಗಿ ಕಾರ್ಯನಿರ್ವಹಿಸಲಿದೆ. ಸಿಎಂ ಅಧಿಕಾರದಿಂದ ಕೆಳಗಿಳಿಯಬೇಕೇ ಎಂಬ ಬಗ್ಗೆ ಇದುವರೆಗೆ ಯಾವುದೇ ಚರ್ಚೆ ನಡೆದಿಲ್ಲ. ಸಿಎಂ ಬದಲಾವಣೆ ಪ್ರಶ್ನೆ ಬರಲ್ಲ ಎನ್ನುವ ವಿಶ್ವಾಸವೂ ನನಗಿದೆ. ಈಗ ಸಿಎಂ ಆಗುವ ಕನಸು ಕಂಡಿಲ್ಲ. ಯಾವುದೋ ಸಂದರ್ಭದಲ್ಲಿ ಹೇಳಿಕೆ ಕೊಟ್ಟಿರುತ್ತಾರೆ. ಎಲ್ಲಿಯೂ ನಾನೇ ಸಿಎಂ ಆಗುತ್ತೇನೆಂದು ಯಾರು ಹೇಳಿಲ್ಲ. 2028ಕ್ಕೆ ಸಿಎಂ ಆಗುವ ತಯಾರಿ ಇದೆ. ಅಲ್ಲಿವರೆಗೂ ಅಭಿಮಾನಿಗಳು ಕಾಯಬೇಕು. ಸದ್ಯಕ್ಕೆ ಅಂತಹ ಆಸೆ ನನಗಿಲ್ಲ ಎಂದು ಸ್ಪಷ್ಟಪಡಿಸಿದರು.

ದೆಹಲಿ ಭೇಟಿಯನ್ನು ರಾಜಕೀಯ ಎಂದು ಪರಿಗಣಿಸಬಾರದು. ಮಾಧ್ಯಮಗಳು ಪದೇ ಪದೇ ಸಿಎಂ ಬದಲಾವಣೆ ಬಗ್ಗೆ ಮಾತನಾಡುತ್ತಿದ್ದರೆ, ಜನರು ಸರ್ಕಾರದ ಮೇಲೆ ಕೋಪಗೊಳ್ಳುತ್ತಾರೆ, 2028ರಲ್ಲಿ ಸಿಎಂ ಹುದ್ದೆಗೆ ಸಿದ್ದನಾಗುವ ಯೋಜನೆ ಇದೆಯೇ ಹೊರತು ಈಗಲ್ಲ. ನನ್ನನ್ನು ಸಿಎಂ ಆಗಿ ನೋಡಲು ಕಾತರರಾಗಿರುವ ಅವರ ಬೆಂಬಲಿಗರು ಅಲ್ಲಿಯವರೆಗೆ ಕಾಯಬೇಕು ಎಂದರು. 'ಸತೀಶ್ ಜಾರಕಿಹೊಳಿ ನೆಕ್ಸ್ ಸಿಎಂ' ಎಂಬ ಆನ್‌ಲೈನ್ ಪ್ರಚಾರದ ಕುರಿತು ಪ್ರತಿಕ್ರಿಯಿಸಿ, ನನ್ನ ಬೆಂಬಲಿಗರು ಇಂತಹ ಪ್ರಚಾರವನ್ನು ಮಾಡಿದ್ದಾರೆ. ಆದರೆ, 2028 ರಲ್ಲಿ ಮುಂದಿನ ಸಿಎಂ ರೇಸ್‌ನಲ್ಲಿ ನಾನೇ ಇರುತ್ತೇನೆ ಎಂದು ತಿಳಿಸಿದರು.

## ಗುರುಮಾತೆ ಕೆ.ಎ.ಮಹಾಜನ್ ಸೇವೆ ಪ್ರಶಂಸನೀಯ



ಕಲಕೇರಿ: ಇತ್ತೀಚೆಗೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಜಲಪೂರಿನಲ್ಲಿ ಕೆ ಎ ಮಹಾಜನ್ ಗುರುಮಾತೆಯರ ವರ್ಗಾವಣೆ ನಿಮಿತ್ಯ ಬೀಳ್ಕೊಡುಗೆ ಸಮಾರಂಭ ಅದ್ಧೂ-ರಿಯಾಗಿ ನಡೆಯಿತು.ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಶಿಕ್ಷಣಸಂಯೋಜ-ಕ ಐ ಎಫ್ ಬಾಲ್ಕಿ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಕರ ಪಾತ್ರ ಪವಿತ್ರವಾಗಿದ್ದು ಮಕ್ಕಳ ಭವಿಷ್ಯವನ್ನು ಬೆಳಗುವ ಜ್ಯೋತಿಗಳಾಗಿದ್ದಾರೆ ಎಂದರು. ಕೆ ಎ ಮಹಾಜನ್ ಗುರುಮಾತೆಯರು ಜಲಪೂರ ಶಾಲೆಯಲ್ಲಿ ಸುಮಾರು ಹದಿನೈದು ವರ್ಷಗಳ ಕಾಲ ಸಾರ್ಥಕ ಸೇವೆಯನ್ನು ಸಲ್ಲಿಸಿ ಬೇರೆ ಶಾಲೆಗೆ ವರ್ಗಾವಣೆ ಆಗಿದ್ದಾರೆ. ಅವರು ಈ ಶಾಲೆಯಲ್ಲಿ ಒಳ್ಳೆಯ ಶಿಕ್ಷಣವನ್ನು ನೀಡುವದರ ಜೊತೆಗೆ ಮಕ್ಕಳಲ್ಲಿ ಉತ್ತಮ ಸಂಸ್ಕಾರವನ್ನು ಬಿತ್ತಿದ್ದಾರೆ ಎಂದರು. ಶಾಲೆಯ ಮುಖ್ಯಗುರು ಮಹ್ಮದಶಫೀಕ ಮುಜಾವರ ಮಾತನಾಡಿ, ಕೆ ಎ ಮಹಾಜನ್ ಗುರುಮಾತೆಯರು ಶಾಲಾಮಕ್ಕಳ ಜೊತೆಗೆ ಜಲಪೂರ ಗ್ರಾಮದ ಎಲ್ಲರೊಂದಿಗೂ ಒಳ್ಳೆಯ ಸಂಬಂದ ಹೊಂದಿದ್ದರು ಎಂದರು. ಅಸ್ಕಿ ಕ್ಲಸ್ಟರ್‌ನ ಸಮೂಹ ಸಂಪನ್ಮೂಲ ವ್ಯಕ್ತಿಗ ರಾಮಣ್ಣ ನಾಯ್ಕೋಡಿ ಮಾತನಾಡಿದರು. ಕೆ ಎ ಮಹಾಜನ್ ಗುರುಮಾತೆಯರು ಸನ್ಮಾನ ಸ್ವೀಕರಿಸಿ ಮಾತನಾಡುತ್ತಾ, ಜಲಪೂರ ಗ್ರಾಮ ನನಗೆ ತುಂಬಾ ಪ್ರೀತಿ ಮತ್ತು ವಿಶ್ವಾಸವನ್ನು ನೀಡಿದೆ. ಶಾಲೆಯ ಮಕ್ಕಳು, ಎಲ್ಲ ಶಿಕ್ಷಕ ಸಿಬ್ಬಂದಿ, ಅಡುಗೆ ಸಿಬ್ಬಂದಿ ಮತ್ತು ಎಲ್ಲ ಪಾಲಕರನ್ನು ಎಂದೂ ಮರೆಯಲಾಗದು ಎಂದರು.ಈ ವೇಳೆ ಶಾಲಾ ಮಕ್ಕಳು, ವಿವಿಧ ಶಾಲೆಗಳಿಂದ ಆಗಮಿಸಿದ ಶಿಕ್ಷಕರು, ಜಲಪೂರ ಗ್ರಾಮಸ್ಥರು ಕೆ ಎ ಮಹಾಜನ್ ಗುರುಮಾತೆಯರನ್ನು ಸನ್ಮಾನಿಸಿದರು.ಇದೇ ಸಂದರ್ಭದಲ್ಲಿ ಶಾಲೆಗೆ ಹೊಸದಾಗಿ ವರ್ಗವಾಗಿ ಬಂದು ಹಾಜರಾದ ರೇಣುಕಾ ಅಗಸರ ಗುರುಮಾತೆಯವರನ್ನು ಎಲ್ಲರ ಸಮ್ಮುಖದಲ್ಲಿ ಸನ್ಮಾನಿಸಿ ಸ್ವಾಗತಿಸಲಾಯಿತು. ಕಾರ್ಯಕ್ರಮದ ಸಾನಿಧ್ಯವನ್ನು ವೇದಮೂರ್ತಿ ಮಲ್ಲಯ್ಯ ಹಿರೇಮಠ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಗ್ರಾಮಪಂಚಾಯತಿ ಬೆಕಿನಾಳದ ಅಧ್ಯಕ್ಷ ರವೀಂದ್ರ ಸುಧಾಕರ, ಗ್ರಾಪಂ ಸದಸ್ಯರಾದ ವೀರಗಂಟೆಪ್ಪ ಬ್ಯಾಕೋಡ, ಸಿದ್ದನಗೌಡ ಬಿರಾದಾರ, ಬಲವಂತ್ರಾಯ ಕುಂಬಾರ, ಮಾಜಿ ಎಸ್ ಡಿ ಎಮ್ ಸಿ ಅಧ್ಯಕ್ಷ ರಾಮನಗೌಡ ಚೌದ್ರಿ, ಹಿರಿಯರಾದ ಶ್ರೀಶೈಲ ಬಿಜ್ಜರಗಿ, ಶರಣಗೌಡ ಕ-ರಿಗೌಡರ, ರಮೇಶ ಸಾಸನೂರ,ಶೇಕಪ್ಪ ಅಗಸರ, ಕಲಕೇರಿ ಸಿ ಆರ್ ಪಿ ಗಳಾದ ಶ್ರೀಶೈಲ ನಾಯ್ಕೋಡಿ, ಶಿಕ್ಷಕರಾದ ಸುರೇಶ ಹೊಸಟ್ಟಿ, ನಬಿಲಾಲ ಹಕೀಮ, ಬಾನು ಹಕೀಮ, ನಾಗಮ್ಮ ಕುಂಬಾರ, ಗುರುಗಳಾದ ಜವಾಹರ ಕುಲಕರ್ಣಿ, ದುಂಡಯ್ಯ ಚಿಕ್ಕಮಠ, ಎಸ್ ಬಿ ಪಡಶೆಟ್ಟಿ, ಶಾಹೀನ ಧರಿ ಉಪಸ್ಥಿತರಿದ್ದರು.

## ಗೌರವ ಕೋಶಾಧ್ಯಕ್ಷರಾಗಿ ಗೌರಿಶಂಕರ ನೇಮಕ



ತಿಕೋಟಾ: ತಾಲೂಕಿನ ಹೊನವಾಡದ ಜವಳಿ ವ್ಯಾಪಾರಸ್ಥ ಗೌರಿಶಂಕರ( ಮುತ್ತು) ಹಿರೇಮಠ ಇವರನ್ನು ತಿಕೋಟಾ ತಾಲೂಕ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕೋಶಾಧ್ಯಕ್ಷರನ್ನಾಗಿ ತಿಕೋಟಾ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿದ್ರಾಮಯ್ಯ ಲಕ್ಕುಂಡಿ ಮಠ ನೇಮಕ ಮಾಡಿದ್ದಾರೆ.

ಮುಂಬರುವ ದಿನಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಪಾಲ್ಗೊಂಡು ಕನ್ನಡದ ಸೇವೆ ಮಾಡಲು ಅವಕಾಶ ಕಲ್ಪಿಸಲಾಗಿದೆ.

### ಶ್ರೀಶೈಲ ಜಗದ್ಗುರು ಡಾ.ಚನ್ನಸಿದ್ಧರಾಮ ಪಂಡಿತಾರಾಧ್ಯಾ ಶ್ರೀಗಳ ಅಭಿಮತ

## ವಚನ ಸಾಹಿತ್ಯದ ಮೂಲಕ ಸಾಮಾಜಿಕ ಕ್ರಾಂತಿಗೈದ ಬಸವಣ್ಣ



ಬಸವನಬಾಗೇವಾಡಿ: ಅಣ್ಣ ಬಸವಣ್ಣನವರು ಜಾತಿಯ ವಿಷಬೀಜವನ್ನು ಕಿತ್ತೆಸೆಯಲು ಹೋರಾಟ ಮಾಡಿದರು. ಅವರ ತತ್ವಗಳನ್ನು ಬೋದನೆ ಹಾಗೂ ಪೋಟೋ ಪೂಜೆ ಮಾಡುವಂತಹ ಭಕ್ತಿಯ ಜೊತೆಗೆ ಅವರ ಅವರ ತತ್ವ ಜೀವನದಲ್ಲಿ ಅಳವಡಿಸಿಕೊಂಡು ಬದುಕಿದಾಗ ಮಾತ್ರ ಬಸವಣ್ಣನವರ ನಿಜವಾದ ಭಕ್ತನಾಗಲು ಸಾಧ್ಯ ಎಂದು ಶ್ರೀಶೈಲ ಪೀಠದ ಜಗದ್ಗುರು ಡಾ.ಚನ್ನಸಿದ್ಧರಾಮ ಪಂಡಿತಾರಾಧ್ಯಾ ಶಿವಾಚಾರ್ಯರು ಹೇಳಿದರು.

ತಾಲೂಕಿನ ಕಣಕಾಲ ಗ್ರಾಮದ ಶ್ರೀ ಮಡಿವಾಳೇಶ್ವರಮಠದಲ್ಲಿ ಶ್ರಾವಣ ಮಾಸದ ಅಂಗವಾಗಿ ಹಮ್ಮಿಕೊಂಡಿದ್ದ ಬಸವ ಪುರಾಣ ಮುಕ್ತಾಯ, ಶ್ರೀಶೈಲ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವ ಹಾಗೂ ಧರ್ಮ ಸಭೆ ಸಮಾರಂಭದ ದಿವ್ಯಸಾನಿಧ್ಯತೆ ವಹಿಸಿ ಮಾತನಾಡಿದರು.

ಅಣ್ಣ ಬಸವಣ್ಣನವರು 12 ನೇ ಶತಮಾತನದಲ್ಲಿ ಎಲ್ಲ ಶರಣರೊಂದಿಗೆ ವಚನ ಸಾಹಿತ್ಯ ಮೂಲಕ ಸಾಮಾಜಿಕ ಕ್ರಾಂತಿಗೈದು ಮೇಲು ಕೀಳು ಎಂಬ ಜಾತಿಯನ್ನು ಹೊಗಲಾಡಿಸಲು ಪ್ರಯತ್ನಿಸಿದರು. ಅವರಂತೆ ನಾವು ಕೂಡಾ ಜಾತಿಯತೆ ಎಂಬ ವಿಷ ಬೀಜವನ್ನು ಹೊಗಲಾಡಿಸಲು ಪ್ರಯತ್ನಿಸಿ ಎಲ್ಲರು ಒಂದೆ ಎಂಬ ಮನೋಭಾವನೆಯನ್ನು ಹೊಂದಿದಾಗ ಮಾತ್ರ ಬಸವಣ್ಣನವರ ನಿಜವಾದ ಆದರ್ಶವನ್ನು ಅಳವಡಿಕೆ ಮಾಡಿಕೊಂಡಂತೆ ವಿನಹ: ಬರಿ ಭಾಷಣ ಮಾಡಿ ಜಾತಿಯ ಎಂಬ ವಿಷಬೀಜ ಬಿತ್ತುವಂತಹ ಕಾರ್ಯವಾದರೆ ಅದು ಬಸವಣ್ಣನವರ ತತ್ವಕ್ಕೆ ವಿರುದ್ದವಾಗಿ ನಡೆದಂತಲ್ಲವೆ? ಎಂದು ಪ್ರಶ್ನಿಸಿದರು.

ಗುರು-ವಿರಕ್ತ ಎಂಬ ಪರಂಪರೆ ಇವೆ ಅವೆರಡರ ಉದ್ದೇಶವು ಒಂದೆ ಸಮಾಜ ಉದ್ದಾರ ಮಾಡುವಂತಹ ಕೆಲಸವನ್ನೆ ಗುರು-ವಿರಕ್ತ ಪೀಠದ ಮಠಾಧೀಶರು ಮಾಡುತ್ತಿದ್ದಾರೆ. ಆದರೆ ಕೆಲವರು ಈ ವಿಷಯದಲ್ಲಿ ಗೊಂದಲ ಸೃಷ್ಠಿ ಮಾಡುತ್ತಿರುವುದಕ್ಕೆ ಸ್ಪಷ್ಟನೆ ನೀಡುತ್ತಿದ್ದೇವೆ ಎಂದರು.

ದೇವರಹಿಪ್ಪರಗಿ ಶಾಸಕ ರಾಜುಗೌಡ ಪಾಟೀಲ ಮಾತನಾಡಿ, ಇಂದು ಬಹುತೇಕ ಜನರು ಶ್ರೀಮಂತರಾಗಿದ್ದಾರೆ. ಆದರೆ ಅವರಿಗೆ ನೆಮ್ಮದಿ ಬದುಕಿಗಾಗಿ ಮಠಗಳ ಆಶ್ರಯ ಅವಶ್ಯಕವಾಗಿದೆ. ಭಾರತದ ಸಂಸ್ಕಾರವನ್ನು ಪಂಚಪೀಠಗಳ ಕಾಪಾಡಿಕೊಂಡು ಬಂದಿವೆ ಎಂದರು.

ಬಸವನಬಾಗೇವಾಡಿಯ ಹಿರೇಮಠದ ಶಿವಪ್ರಕಾಶ ಶಿವಾಚಾರ್ಯ ಸ್ವಾಮಿಜಿ, ಕರಿಭಂಟನಾಳದ ಶಿವಕುಮಾರ ಸ್ವಾಮಿಜಿ, ದೇವರಹಿಪ್ಪರಗಿಯ ವೀರಗಂಗಾಧರ ಶಿವಾಚಾರ್ಯ ಸ್ವಾಮಿಜಿ, ಕಣಕಾಲದ ಘನಮಠೇಶ್ವರ ಸ್ವಾಮಿಜಿ ಮಾತನಾಡಿದರು.

ಗ್ರಾ.ಪಂ ಅಧ್ಯಕ್ಷೆ ಶರಣಮ್ಮ ಕುಂಬಾರ, ಉಪಾಧ್ಯಕ್ಷ ಸಂಗಪ್ಪ ಸಜ್ಜನ, ಬಸವಸೈನ್ಯ ಸಂಸ್ಥಾಪಕ ಅಧ್ಯಕ್ಷ ಶಂಕರಗೌಡ ಬಿರಾದಾರ, ಜಿ ಕೆ ದಿನ್ನಿ, ಬಸಲಿಂಗಪ್ಪ ಕುಂಬಾರ, ಶಿವಾನಂದ ಹುಲ್ಲೂರ, ಕಾಶಿನಾಥ ಸಜ್ಜನ, ರಾಜಶೇಖರ ಹುಲ್ಲೂರ, ಮಂತಯ್ಯ ಮಠಪತಿ ಸೇರಿದಂತೆ ಮುಂತಾದವರು ಇದ್ದರು.

"ದೇವರಹಿಪ್ಪರಗಿ ಮತಕ್ಷೇತ್ರದಲ್ಲಿ 27 ಮಠಗಳಿವೆ. ಆ ಮಠಗಳು, ಮಠಾಧೀಶರು ಯಾರಿಗೆ ಒಲವು ತೋರಿ ಆಶಿರ್ವಾದ ಮಾಡುತಾರೋ ಅವರು ಎಂಎಲ್‌ಎ ಆಗುತ್ತಾರೆ ಎಂಬುದಕ್ಕೆ ಈ ಬಾರಿಯ ಶಾಸಕ ರಾಜುಗೌಡ ಪಾಟೀಲರ ಗೆಲುವೆ ಸಾಕ್ಷಿಯಾಗಿದೆ."

» - ಶ್ರೀ ಘನಮಠೇಶ್ವರ ಸ್ವಾಮಿಜಿ
ಕಣಕಾಲ, ಢವಳಗಿ

## ಸಾತಲಗಾಂವ ಕ್ರಾಸ್ ನಲ್ಲಿ 110 /11 ಕೆವಿ ವಿದ್ಯುತ್ ವಿತರಣಾ ಕೇಂದ್ರ ಉದ್ಘಾಟನೆ

### ಇಂಡಿ ತಾಲೂಕಿಗೆ ಹೆಸ್ಕಾಂ, ಕೆಪಿಟಿಸಿಎಲ್ ಕೊಡುಗೆ ಅನನ್ಯ :ಶಾಸಕ ಯಶವಂತರಾಯಗೌಡ



ಇಂಡಿ: ತಾಲೂಕಿನಲ್ಲಿ ಈಗಾಗಲೇ 13 ವಿದ್ಯುತ್ ವಿತರಣಾ ಕೇಂದ್ರಗಳಿದ್ದು ಇನ್ನೂ ಎರಡು ಸಧ್ಯದಲ್ಲಿಯೇ ಪ್ರಾರಂಭವಾಗಲಿದ್ದು ಇನ್ನು ನಾಲ್ಕು ಮಂಜುರಾತಿ ಹಂತದಲ್ಲಿವೆ. ತಾಲೂಕಿಗೆ ವಿದ್ಯುತ್ ಇಲಾಖೆಯ ಕೊಡುಗೆ ಅಪಾರವಾಗಿದೆ ಎಂದು ಶಾಸಕ ಯಶವಂತರಾಯಗೌಡ ಪಾಟೀಲರು ಹೇಳಿದರು.

ಅವರು ತಾಲೂಕಿನ ಸಾತಲಗಾಂವ ಕ್ರಾಸ್ ನಲ್ಲಿ 110/ 11 ಕೆ ವಿ ವಿದ್ಯುತ್ ವಿತರಣಾ ಕೇಂದ್ರದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

ರಾಜ್ಯವು ವಿದ್ಯುತ್ ವಿತರಣೆಯಲ್ಲಿ ಸ್ವಾವಲಂಬಿಯಾಗಿದ್ದು ಹೈಡ್ರೊ, ವಿಂಡ್, ಸೋಲಾರ, ಎನ್.ಟಿ.ಪಿಸಿ ಮತ್ತು ಕಾರ್ಖಾನೆಯ ಕೋಜೆನ್ ವಿದ್ಯುತ್ ಉತ್ಪಾದನೆಯಾಗುತ್ತಿದ್ದು ದಿನದ ಏಳು ಗಂಟೆ ವಿದ್ಯುತ್ ಇಂಡಿ ತಾಲೂಕಿನಲ್ಲಿ ರೈತರಿಗೆ ನೀಡಲಾಗುತ್ತಿದೆ ಎಂದರು.

ಕೇಂದ್ರದ ಆಗಿನ ಇಂಧನ ಸಚಿವ ಸುಶೀಲಕುಮಾರ ಇವರ ಸಹಕಾರದಿಂದ ಎನ್‌ಟಿಪಿಸಿ ಕೂಡಗಿಯಲ್ಲಿ ಆಗಿದ್ದು ಆಲಮಟ್ಟಿ ಆಣೆಕಟ್ಟಿನ ಎತ್ತರ 524 ಮೀ ಆದರೂ ನಾವು ರೈತರ ಹೊಲಗಳಿಗೆ ವಿದ್ಯುತ್ ಸಾಕಾಗುತ್ತದೆ ಎಂದರು.

ಈ ಹಿಂದೆ ದಕ್ಷಿಣ ಕರ್ನಾಟಕದಲ್ಲಿ ವಿದ್ಯುತ ತೊಂದರೆ ಇರಲಿಲ್ಲ. ನಾವು ನ್ಯಾಯಯುತವಾದ ಬೇಡಿಕೆ ಮಾಡಿದ್ದರಿಂದ ಸಿದ್ದರಾಮಯ್ಯನವರು ಸಹಕರಿಸಿದ್ದಾರೆ. ಇದರಿಂದ ಗ್ರಾಮೀಣ ಬದುಕು ಬದಲಾಗುತ್ತಿದೆ. ಅದಲ್ಲದೆ ತಾಲೂಕಿನಲ್ಲಿ ವಿದ್ಯುತ್ ಸೇರಿದಂತೆ ಎಲ್ಲ 159 ಇಲಾಖೆಗಳಿಗೂ ಅನುದಾನ ತಂದು ಅಭಿವೃದ್ಧಿ ಮಾಡುತ್ತಿದ್ದೇವೆ ಎಂದರು.

ಮುಖ್ಯ ಅಭಿಯಂತರ ಜಿ.ಕೆ.ಗೋಟ್ಯಾಳ ಮಾತನಾಡಿ, ಸಾತಲಗಾಂವ ಕ್ರಾಸ್ ನಲ್ಲಿ ಇಂದು ಪ್ರಾರಂಬಿಸಲಾಗಿರುವ ವಿದ್ಯುತ್ ವಿತರಣಾ ಕೇಂದ್ರ 20 ಕೋಟಿ ವೆಚ್ಚದಲ್ಲಿ ಪ್ರಾರಂಭಿಸಲಾಗಿದೆ. ಇದರಿಂದ ಸಾಲೋಟಗಿ, ನಾದ, ಸಾತಲಗಾಂವ ಮತ್ತು ಗೋಳಸಾರ ಗ್ರಾಮಗಳಿಗೆ ರೈತರ ಹೊಲಗಳಿಗೆ ವಿದ್ಯುತ್ ವಿತರಣೆ ಯಾಗುತ್ತಿದೆ ಎಂದರು.

ಇಂಡಿ ತಾಲೂಕಿನಲ್ಲಿ ಇರುವಷ್ಟು ವಿತರಣಾ ಕೇಂದ್ರ ರಾಜ್ಯದ ಯಾವದೇ ತಾಲೂಕಿನಲ್ಲಿ ಇಲ್ಲ. ಇನ್ನು ಹಡಲಸಂಗ, ಭೈರುಣಗಿ, ನಿಂಬಾಳ ಗ್ರಾಮಗಳಲ್ಲಿ ವಿತರಣಾ ಕೇಂದ್ರಸದಸ್ಯದಲ್ಲಿಯೇಪ್ರಾರಂಭಿಸಲಾಗುತ್ತದೆ ಎಂದರು. ಗಂಗಾಧರ ಲೋಣಿ, ಬಸವರಾಜ ಗೊರನಾಳ, ದಾದಾಸ್ವಾಮಿ ಮಠ ಮಾತನಾಡಿದರು.

ವೇದಿಕೆಯ ಮೇಲೆ ಪರಮಪೂಜ್ಯ ಮದ್ದಾನಿ ಮಹಾರಾಜರು, ಕಂದಾಯ ಉಪವಿಬಾಗಾಧಿಕಾರಿ ಅಬೀದ್ ಗದ್ಯಾಳ, ತಹಸೀಲ್ದಾರ ಬಿ.ಎಸ್.ಕಡಕಬಾವಿ, ಇಒ ಬಾಬು ರಾಠೋಡ, ವೃತ್ತ ಅಧಿಕ್ಷಕ ಅಭಿಯಂತರ ರಮೇಶ ಪವಾರ, ಹೆಸ್ಕಾಂ ಅಧಿಕ್ಷಕ ಅಭಿಯಂತರ ಸಿದ್ದಪ್ಪ ಬಿಂಜಗೇರಿ,ಪುರಸಭೆ ಅಧ್ಯಕ್ಷ ಲಿಂಬಾಜಿ ರಾಠೋಡ, ಉಪಾಧ್ಯಕ್ಷ ಜಹಾಂಗೀರ ಸೌದಾಗರ,ಗ್ರಾ.ಪಂ ಸಾಲೋಟಗಿ ಅಧ್ಯಕ್ಷೆ ದಾನಮ್ಮ ಕುಂಬಾರ, ನಾದ ಗ್ರಾ.ಪಂ ಅಧ್ಯಕ್ಷ ಸಿದರಾಯ ಐರೋಡಗಿ, ಜಗದೀಶ ಜಾಧವ, ಎಸ್.ಎ.ಬಿರಾದಾರ, ಎಸ್.ಆರ್. ಮೆಂಡೆಗಾರ, ಆರ್.ವಿ.ಕುಂಬಾರ ಮತ್ತಿತರಿದ್ದರು. ಭೂಮಿದಾನ ನೀಡಿದ ದಯಾನಂದ ಅವಟಿ, ಗುತ್ತಿಗೆದಾರ ಮಹಾದೇವ ಗಚ್ಚಿನಮಠ ಇವರನ್ನು ಸನ್ಮಾನಿಸಲಾಯಿತು.

## ಬದುಕಲು ಸನ್ಮಾರ್ಗ ತೋರಿಸುವ ಜಾನಪದ ಸಾಹಿತ್ಯ: ದೇಸಾಯಿ




ವಿಜಯಪುರ: ಜಾನಪದ ಸಾಹಿತ್ಯ ಬದುಕಲು ಸನ್ಮಾಗ9 ತೋರಿಸಿಕೊಟ್ಟಿದೆ.

ಮಾನವೀಯ ಮೌಲ್ಯಗಳನ್ನು ಕಾಪಾಡಿದ ಕೀರ್ತಿ ಗ್ರಾಮೀಣರಿಗೆ ಸಲ್ಲುತ್ತದೆ ಎಂದು ವಿಜಯಪುರ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಪ್ರಾಂಶುಪಾಲ ರಮೇಶ ದೇಸಾಯಿ ಅಭಿಪ್ರಾಯ ವ್ಯಕ್ತಪಡಿಸಿದರು.

ಮಂಗಳವಾರ ಜಾನಪದ ಚಿಂತನ ಗೋಷ್ಠಿಯನ್ನು ಉದ್ಘಾಟಿಸಿ ಅವರು ಮಾತನಾಡುತ್ತಾ, ಜಾನಪದ ಗೀತೆಗಳು ಬದುಕು ಪರಿವತ9ನೆ ಮಾಡಿಕೊಳ್ಳುವ ಸಾಮರ್ಥ್ಯ ಹೊಂದಿವೆ, ಜಾನಪದ ಸಾಹಿತ್ಯ ನಮ್ಮೆಲ್ಲರ ಸಂಸ್ಕೃತಿಯ ಪ್ರತೀಕವಾಗಿದೆ ಎಂದರು. ಮುಖ್ಯ ಅತಿಥಿಗಳಾದ ಡಾ.ಸಂಗಮೇಶ ಮೇತ್ರಿ ಮಾತನಾಡಿ, ಮಕ್ಕಳಲ್ಲಿ ಜಾನಪದ ಸಾಹಿತ್ಯ ಅಭಿರುಚಿ ಬೆಳೆಸುವ ಅವಶ್ಯವಿದೆ. ಜಾನಪದ ಸಾಹಿತ್ಯಕ್ಕೆ ಪೂರ್ವಜರ ಕೊಡುಗೆ ಅಪಾರವಾಗಿದೆ. ರೈತರು ಹಾಗು ಮಹಿಳೆಯರು ದಿನನಿತ್ಯ ಕಾಯಕದಲ್ಲಿ ತೊಡಗಿರುವಾಗ ಹಾಡುಗಳನ್ನು ರಚಿಸಿ ಹಾಡಿದ್ದಾರೆ. ಎಂದರು. ಜಾನಪದ ವಿದ್ವಾಂಸ, ಬಸವನ ಬಾಗೇವಾಡಿ ತಾಲೂಕು ಸರಕಾರಿ ನೌಕರರ ಸಂಘದ ಅಧ್ಯಕ್ಷ ಶಿವಾನಂದ ಮಂಗಾನವರ ಮಾತನಾಡಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಇಂದು ಅನೇಕ ಗೋಷ್ಠಿಯನ್ನು ಹಾಗು ದತ್ತಿ ನಿಧಿ ಕಾರ್ಯಕ್ರಮ ಮಾಡುವದರ ಮೂಲಕ ಜಾನಪದ ಸಾಹಿತ್ಯ ಉಳಿಸುವ ಹಾಗು ಬೆಳೆಸುವ ಕಾರ್ಯ ಶ್ಲಾಘನೀಯ ಎಂದರು. ತಾಳಿಕೋಟೆಯ ಜಾನಪದ ವಿದ್ವಾಂಸೆ ಶಿವಲೀಲಾ ಮುರಾಳ ಮಾತನಾಡಿ, ಗರತಿಯ ಜೀವನ ಹಾಡುಗಳಲ್ಲಿ ಹಾಡಿ ಜಾನಪದ ಸಾಹಿತ್ಯದ ಮೌಲ್ಯಗಳನ್ನು ಮಕ್ಕಳಲ್ಲಿ ಅರಿವು ಮೂಡಿಸಬೇಕೆಂದರು.

ತತ್ವ ಪದ ವಿದ್ವಾಂಸ ಮಹೆತಾಬ ಕಾಗವಾಡ ಹಾಡಿ ರಂಜಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಹಾಸಿಂಪೀರ ವಾಲಿಕಾರ ಮಾತನಾಡಿ, ಜಾನಪದ ಸಾಹಿತ್ಯ ನಮ್ಮೆಲ್ಲರ ಜೀವನದ ಮೌಲ್ಯಯುತ ಸಂದೇಶವಾಗಿದೆ ಎಂದರು.

ವೇದಿಕೆಯಲ್ಲಿ ಉಪ-ಪ್ರಾಚಾಯ9 ಪ್ರವೀಣ ಕುಮಾರ ಮಸೂತಿ, ಡಿ ಜಿ ಅಳ್ಳಿಕಟ್ಟಿ, ರವಿ ಖೇಡಗಿ ಉಪಸ್ಥಿತರಿದ್ದರು.

ಶಶಿಕಲಾ ನಾಯ್ಕೋಡಿ ಪ್ರಾಥಿ9ಸಿದರು, ಬಿ ಎನ್ ಬಿರಾದಾರ ಸ್ವಾಗತಿಸಿದರು, ಸಿ ಎಸ್ ಹಿರೇಮಠ ನಿರೂಪಿಸಿದರು, ಜಿ ಎಸ್ ಸಜ್ಜನ ವಂದಿಸಿದರು. ಕಾರ್ಯಕ್ರಮದಲ್ಲಿ ಸುವಣಾ9 ಕತ್ನಳ್ಳಿ, ರೇಷ್ಮಾ ಪೀಸೆ, ಭಾಗ್ಯಜ್ಯೋತಿ, ಅಂಜುರಾ ಇನಾಮದಾರ, ಸುನಿತಾ ಮಠಪತಿ, ಮಂಜುಳಾ ಕಾಳಗಿ, ಅನುರಾಧ ಪೀರಗೊಂಡ, ಪೂಜಾ ಹೀರೆಮನಿ, ಬಿ ವಾಯ ಧನಗೊಂಡ, ವಾಯ ಪಿ ತಳವಾರ, ಬಿ ಬಿ ಮಾಳಿ, ಶಿವಾನಂದ ಬಜಂತ್ರಿ, ಮಹಾಂತೇಶ ಬಜಂತ್ರಿ, ಎಂ ವಿ ತಾವರಖೇಡ, ಡಿ ಎಮ್ ಮ್ಯಾಗೇರಿ, ವಾಯ ಎಂ ಇಂಡಿಕರ, ಎ ಬಿ ನದಾಫ, ಸಿ ಎ ಪಾಟೀಲ, ಸಿ ಎಸ್ ಸಿಡ್ಯಾಳ, ಎಮ್ ಬಿ ಕೌಲಗಿ, ಸಂಜೀವ ಕುಮಾರ ಸರಸಂಬಿ, ರೀಯಾಜ ರೋಣ, ಎ ಎಮ್ ಲೋಣಿ, ಜಿ ಬಿ ದೇವರಮನಿ, ಸುರೇಶ ಕಲಘಟಗಿ, ಬೀರು ಕರಂಡೆ, ವಿಶಾಲ ಮೋಗಲಿ, ಜಾಕೀರ ಪಟೇಲ, ಅಮೀತ ಹಾಲಳ್ಳಿ ಮುಂತಾದವರು ಉಪಸ್ಥಿತರಿದ್ದರು.

# ಸುಳ್ಳು ಸಾಕ್ಷಿ ಸೃಷ್ಟಿಸಿ ಬಂಧನ ಖಂಡನೆ



ಕಾಳಗಿ : ದಲಿತ ಸೇನೆಯ ರಾಜ್ಯಾಧ್ಯಕ್ಷ ಹನುಮಂತ ಜಿ. ಯಳಸಂಗಿ ಮತ್ತು ಜಿಲ್ಲಾ ಅಧ್ಯಕ್ಷ ಮಂಜುನಾಥ ಭಂಡಾರಿ ಅವರ ಮೇಲೆ ಸುಳ್ಳು ಸಾಕ್ಷಿ ಸೃಷ್ಟಿಸಿ ದಲಿತ ಸಮಾಜದ ಪ್ರತಿಷ್ಠಿತ ವ್ಯಕ್ತಿಗಳ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದು. ಅವರ ಮೇಲೆ ಇರುವ ಆರೋಪವನ್ನು ತೆಗೆದು ಹಾಕಿ ಪ್ರಕರಣವನ್ನು ಕೈ ಬಿಡಬೇಕು ಎಂದು ತಹಸೀಲ್ದಾರ ಮುಖಾಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ರವರಿಗೆ ಕಾಳಗಿ ತಾಲೂಕು ದಲಿತ ಸೇನೆಯ ಕಾರ್ಯಕರ್ತರು ಮನವಿ ಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ದಲಿತ ಸೇನೆಯ ಅಧ್ಯಕ್ಷ ನಾಗರಾಜ ಬೇವಿನಕರ, ಜಿಲ್ಲಾ ಸಂ. ಕಾರ್ಯದರ್ಶಿ ಖತಲಪ್ಪ ಅಂಕನ, ರಮೇಶ ಕುಡ್ಡಳ್ಳಿ, ಮಲ್ಲು ಮಡಕಿ, ಖಾಲಿದ ಪಟೇಲ, ಮಾರುತಿ ತೆಗಲತಿಪ್ಪಿ, ಕೃಷ್ಣ ತೆಂಗಳಿ, ಹನುಮಂತ ಸಾಲಹಳ್ಳಿ ಸೇರಿದಂತೆ ಅನೇಕ ದಲಿತ ಸೇನೆಯ ಕಾರ್ಯಕರ್ತರು ಉಪಸ್ಥಿತರಿದ್ದರು.

# ನಿರುದ್ಯೋಗಿಗಳ ಭವಿಷ್ಯದೊಂದಿಗೆ ರಾಜ್ಯ ಸರಕಾರ ಚೆಲ್ಲಾಟ



ಕಲಬುರಗಿ: ನಿರುದ್ಯೋಗಿಗಳಿಗೆ ವಯಸ್ಸಿನ ಸಂಕಟವಾದರೆ, ಅವರ ಭವಿಷ್ಯದೊಂದಿಗೆ ರಾಜ್ಯ ಸರಕಾರ ಚೆಲ್ಲಾಟವಾಡುತ್ತಿದೆ ಎಂದು ಬಿಜೆಪಿ ಮುಖಂಡ ಮಲ್ಲಿಕಾರ್ಜುನ ಮರತೂರಕರ್ ಆರೋಪಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ನಮ್ಮ ಭಾಗದ ಬಡ ಕುಟುಂಬದ ವಿದ್ಯಾರ್ಥಿಗಳು ಕನಸಿನ ಮೂಟೆ ಹೊತ್ತು, ಬೇರೆ ಜಿಲ್ಲೆಗಳಲ್ಲಿ ವಿದ್ಯಾಭ್ಯಾಸ ಮಾಡಿ, ಸರಕಾರಿ ಉದ್ಯೋಗ ಅರಸಿ ಪರೀಕ್ಷೆ ಬರೆದಿರುತ್ತಾರೆ. ಅಂತಹ ಉದ್ಯೋಗಾಕಾಂಕ್ಷಿ ಗಳನ್ನು ಸರಕಾರ ಮತ್ತೊಮ್ಮೆ ಸಂಕಷ್ಟಕ್ಕೆ ದೂಡಿದೆ. ನಾನಾ ಗ್ರೂಪ್ –ಬಿ ಹುದ್ದೆಗಳಿಗೆ ಸೆ. 14 ಮತ್ತು 15ರಂದು ನಡೆಯಲಿರುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸೆ.5 ರಂದೆ ಪ್ರವೇಶ ಪತ್ರ ಡೌನ್ಲೋಡ್ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿತ್ತು. ಆದರೆ, ತಾಂತ್ರಿಕ ಕಾರಣಗಳಿಂದ ಕೆಲವು ಅಭ್ಯರ್ಥಿಗಳ ಪರೀಕ್ಷಾ ಕೇಂದ್ರಗಳ ಹಂಚಿಕೆಯಲ್ಲಿಯೂ ವ್ಯತ್ಯಯ ಕಂಡುಬಂದಿದ್ದು, ತಾತ್ಕಾಲಿಕವಾಗಿ ಪ್ರವೇಶ ಪತ್ರದ ಡೌನ್ಲೋಡ್ ಪ್ರಕ್ರಿಯೆ ಸ್ಥಗಿತಗೊಳಿಸುವ ಮೂಲಕ ಕೆಪಿಎಸ್‌ಸಿ ಹಾಗೂ ಸರಕಾರದ ಹುಳುಕು ಬಯಲಾಗಿದೆ ಎಂದು ಟೀಕಿಸಿದ್ದಾರೆ.

ಕೆಪಿಎಸ್ಸಿ ಪರೀಕ್ಷೆಯ ಗೊಂದಲಗಳ ನಡುವೆ ಹತಕ್ಕೆ ಬಿದ್ದವರಂತೆ ಪರೀಕ್ಷೆ ನಡೆಸಿದ್ದ ರಾಜ್ಯ ಸರಕಾರ, ಪರೀಕ್ಷೆಯ ಪ್ರಶ್ನೆ ಪತ್ರಿಕೆಯ ನ್ಯೂನತೆ ಬಯಲಾದ ಬೆನ್ನಲ್ಲೇ ಮತ್ತೆ ಮರು ಪರೀಕ್ಷೆಗೆ ಆದೇಶ ಹೊರಡಿಸಿ ಸಾವಿರಾರು ಪರೀಕ್ಷಾರ್ಥಿಗಳ ಶಾಪಕ್ಕೆ ಗುರಿಯಾಗಿತ್ತು. ಇದೀಗ ಅಂಥದ್ದೇ ಎಡವಟ್ಟು ಮಾಡಲು ಸರಕಾರ ಮುಂದಾಗಿದೆ. ಸೆ.22ರಂದು ಯುಪಿಎಸ್ಸಿ ಹಾಗೂ ಎಸ್ ಎಸ್ ಸಿ ಪರೀಕ್ಷೆಗಳ ದಿನಾಂಕ ನಿಗದಿಯಾಗಿದ್ದು, ಅದೇ ದಿನ ಪಿಎಸ್‌ಐ ಪರೀಕ್ಷೆ ನಡೆಸಲು ಮುಂದಾಗಿದ್ದು, ಉದ್ಯೋಗಾಕಾಂಕ್ಷಿಗಳ ವಿರೋಧಿ ಧೋರಣೆ ಅಲ್ಲದೆ ಬೇರೇನೂ ಅಲ್ಲ. ಹೀಗಾಗಿ ಪಿಎಸ್‌ಐ ಪರೀಕ್ಷೆ ಮುಂದೂಡಿ, ಗ್ರೂಪ್–ಬಿ ಪರೀಕ್ಷೆಯ ಪ್ರವೇಶ ಪತ್ರ ಹಾಗೂ ಪರೀಕ್ಷಾ ಕೇಂದ್ರಗಳ ಗೊಂದಲ ನಿವಾರಿಸಬೇಕು ಎಂದು ಆಗ್ರಹಿಸಿದ್ದಾರೆ.

ಕೇಂದ್ರ ಸರಕಾರ ಮೊದಲೇ ನಿಗದಿಪಡಿಸಿದ ಯುಪಿಎಸ್‌ಸಿ ಪರೀಕ್ಷೆಯನ್ನು ಪರಿಗಣನೆಗೆ ತೆಗೆದುಕೊಳ್ಳದೆ, ರಾಜ್ಯ ಸರಕಾರ ಪಿಎಸ್‌ಐ ಪರೀಕ್ಷೆ ನಡೆಸುತ್ತಿದೆ. ಪರೀಕ್ಷೆ ಮುಂದೂಡದಿದ್ದರೆ ರಾಜ್ಯ ಸರಕಾರದ ವಿರುದ್ಧ ಉಗ್ರ ಹೋರಾಟ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ.

# ವಿಮೋಚನಾ ಚಳವಳಿಯ ನೆನಪು ಕಾರ್ಯಕ್ರಮ ಇಂದು



ಕಲಬುರಗಿ: ಕಿರಣ ಗ್ರಾಮೀಣ ಅಭಿವೃದ್ಧಿ ಸೇವಾ ಸಂಘ ಮತ್ತು ಸೌಭಾಗ್ಯಸಿರಿ ಸಾಮಾಜಿಕ ಸೇವಾ ಟ್ರಸ್ಟ್ ಅವರ ಸಂಯುಕ್ತಾಶ್ರಯದಲ್ಲಿ ಸೆ.11ರಂದು ಕಲ್ಯಾಣ ಕರ್ನಾಟಕ ಉತ್ಸವದ ನಿಮಿತ್ಯ ವಿಮೋಚನಾ ಚಳುವಳಿಯ ನೆನಪು ಎಂಬ ವಿನೂತನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಿಗ್ಗೆ 10–30 ಗಂಟೆಗೆ ಸರ್ವಜ್ಞಪದವಿ ಪೂರ್ವ ಕಾಲೇಜಿನಲ್ಲಿ ನಡೆಯುವ ಕಾರ್ಯಕ್ರಮವನ್ನು ಹಿರಿಯ ಪತ್ರಕರ್ತ ದೇವಯ್ಯಗುತ್ತೇದಾರಕಾರ್ಯಕ್ರಮಉದ್ಘಾಟಿಸಲಿದ್ದಾರೆ. ಅಧ್ಯಕ್ಷತೆಯನ್ನು ಸರ್ವಜ್ಞ ಪದವಿ ಪೂರ್ವ ಕಾಲೇಜಿನ ಸಂಸ್ಥಾಪಕ ಅಧ್ಯಕ್ಷರಾದ ಪ್ರೊ. ಚನ್ನಾರೆಡ್ಡಿ ಪಾಟೀಲ್ ವಹಿಸಲಿದ್ದಾರೆ.

ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಮಹಿಪಾಲರೆಡ್ಡಿ ಮುನ್ನೂರ ಅವರು ವಿಶೇಷ ಉಪನ್ಯಾಸ ನೀಡಲಿದ್ದು, ಮುಖ್ಯ ಅತಿಥಿಗಳಾಗಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಶಿವಶರಣಪ್ಪ ಮುಳೆಗಾಂವ, ಕೆಕೆಸಿಸಿಐ ಮಾಜಿ ಅಧ್ಯಕ್ಷರಾದ ಉಮಾಕಾಂತ ನಿಗ್ಗುಡಗಿ ಭಾಗವಹಿಸುವರು ಎಂದು ಉಭಯ ಸಂಸ್ಥೆಯ ಸಂಯೋಜಕರಾದ ಸುರೇಶ ಬಡಿಗೇರ ಹಾಗೂ ಮಂಜುನಾಥ ನಾಲವಾರಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇದೇ ಸಂದರ್ಭದಲ್ಲಿ ಎಸ್. ಪಿ. ಸುಳ್ಳದ್, ಚಂದ್ರೀಕಾ ಪರಮೇಶ್ವರ, ಮಲ್ಲಣ್ಣ ಮಡಿವಾಳ, ಉದಯ ಪಾಟೀಲ್, ಡಾ. ವಿಕ್ರಮ ಸಿದ್ದಾರೆಡ್ಡಿ, ಡಾ. ಸಲ್ಮಾನ್ ಪಟೇಲ್, ಡಾ. ಫಾರೂಕ್ ಮನ್ನೂರ, ಡಾ. ಸೈಯದ್ ಆತೀಫ್ ಹಾಸ್ಮಿ, ಶಿವಕಾಂತ ಮಹಾಜನ್ ಅವರನ್ನು ಸತ್ಕರಿಸಲಾಗುವುದು ಎಂದು ತಿಳಿಸಿದ್ದಾರೆ.

# ಸಚಿವ ಸಂಪುಟದಲ್ಲಿ ಮೀಸಲಾತಿ ವರ್ಗೀಕರಣ ಘೋಷಣೆಗೆ ಒತ್ತಾಯ



ಕಲಬುರಗಿ: ಇದೇ 17ರಂದು ಜಿಲ್ಲೆಯಲ್ಲಿ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಒಳಮೀಸಲಾತಿ ವರ್ಗೀಕರಣ ಘೋಷಣೆ ಮಾಡಬೇಕು ಎಂದು ಮಾದಿಗ ಸಮಾಜದ ಮುಖಂಡ ರವಿ ಸಿಂಗೆ ಅರಣಕಲ್ ಅವರು ಒತ್ತಾಯಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿದ ಅವರು, ತಮ್ಮ ಹಕ್ಕು ಪಡೆಯಲು ಒಳ ಮೀಸಲಾತಿ ವರ್ಗೀಕರಣಕ್ಕಾಗಿ ನಡೆದ ಹೋರಾಟ ಹಾಗೂ ತ್ಯಾಗ ಬಲಿದಾನಕ್ಕೆ ಸುಪ್ರೀಂ ಕೋರ್ಟ್ ತೀರ್ಪಿನಿಂದ ಜಯ ಸಿಕ್ಕಂತಾಗಿದೆ.

ತಲೆತಲೆಮಾರಿನಿಂದ ತುಳಿತಕ್ಕೊಳಗಾಗಿ ಮೀಸಲಾತಿಯ ಸರ್ಕಾರದ ಸರಿಯಾದ ಪ್ರಯೋಜನ ಪಡೆಯಲಾಗದೆ ನೋವು ಅನುಭವಿಸುತ್ತಿದ್ದ ಪರಿಶಿಷ್ಟ ಜಾತಿ/ಪಂಗಡದ ಜನಾಂಗ ಒಳ ಮೀಸಲಾತಿಗಾಗಿ ನಡೆದ ಸುದೀರ್ಘ ಹೋರಾಟದಲ್ಲಿ ಹಲವರ ತ್ಯಾಗ ಬಲಿದಾನದ ಫಲವಾಗಿ ಸುಪ್ರೀಂ ಕೋರ್ಟ್ ಸಿಜೆಐ ಚಂದ್ರಚೂಡ್ ನೇತೃತ್ವದ 7 ಸದಸ್ಯರ ಪೀಠವು ಒಳ ಮೀಸಲಾತಿ ನೀಡುವ ಪ್ರಸ್ತಾವವನ್ನು ಎತ್ತಿ ಹಿಡಿದು, ಒಳ ಮೀಸಲಾತಿ ಸಂವಿಧಾನ ಬಾಹಿರ ಕ್ರಮವಲ್ಲ, ಎಲ್ಲರಿಗೂ ಸಮಾನ ಅವಕಾಶ ಸಿಗಬೇಕು ಎನ್ನುವದು ಸಂವಿಧಾನದ ಮೂಲ ಮಂತ್ರವಾಗಿದೆ. ಕೂಡಲೇ ಕರ್ನಾಟಕ ಸರಕಾರ ತನ್ನ ಪ್ರಣಾಳಿಕೆಯಲ್ಲಿ ತಿಳಿಸಿದಂತೆ ಈ ಮೀಸಲಾತಿ ಕ್ರಮವನ್ನು ಕೂಡಲೇ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ದಲಿತರ ಬಗ್ಗೆ ಕಾಳಜಿ ಇದ್ದರೆ ಕಲಬುರಗಿ ಜಿಲ್ಲೆಯಲ್ಲಿ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಮೀಸಲಾತಿ ವರ್ಗೀಕರಣವನ್ನು ಘೋಷಣೆ ಮಾಡಬೇಕು ಎಂದು ಅವರು ಆಗ್ರಹಿಸಿದ್ದಾರೆ.

# ಕಲ್ಯಾಣ ಕರ್ನಾಟಕ ಉತ್ಸವ ಆಚರಣೆಗೆ ಸಕಲ ಸಿದ್ಧತೆ

ಅಫಜಲಪುರ: ಸೆಪ್ಟಂಬರ್ 17ರಂದು ಕಲ್ಯಾಣ ಕರ್ನಾಟಕ ಉತ್ಸವ ಹಾಗೂ ವಿಶ್ವಕರ್ಮ ಜಯಂತಿಯನ್ನು ಸರಳವಾಗಿ ಸಂಭ್ರಮದಿಂದ ಅರ್ಥಪೂರ್ಣವಾಗಿ ಆಚರಿಸಲಾಗುವುದುಎಂದುತಹಸೀಲ್ದಾರಸಂಜೀವಕುಮಾರ ದಾಸರ್ ತಿಳಿಸಿದರು. ಪಟ್ಟಣದ ತಹಸೀಲ್ ಕಚೇರಿ ಸಭಾಂಗಣದಲ್ಲಿ ವಿವಿಧ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರೊಂದಿಗೆ ಕಲ್ಯಾಣ ಕರ್ನಾಟಕ ಉತ್ಸವ ಹಾಗೂ ವಿಶ್ವಕರ್ಮ ಜಯಂತಿ ಪ್ರಯುಕ್ತ ಹಮ್ಮಿಕೊಂಡ ಪೂರ್ವಭಾವಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು ಸೆಪ್ಟೆಂಬರ್ 17ರ ಪ್ರಯುಕ್ತ ಈಗಾಗಲೇ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದ್ದು ಅಂದಿನ ದಿನ ಸರ್ಕಾರಿ ಮತ್ತು ಅರೆ ಸರ್ಕಾರಿ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು ಬೆಳಿಗ್ಗೆ 7:30 ಗಂಟೆಗೆ ತಮ್ಮ ಕಚೇರಿ ಆವರಣದಲ್ಲಿ ಧ್ವಜಾರೋಹಣ ನೆರವೇರಿಸಿ 8.45 ಕ್ಕೆ ತಹಸೀಲ್ ಕಚೇರಿ ಆವರಣದಲ್ಲಿ ನೆರವೇರುವ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕು ಹಾಗೂ ವಿಶ್ವಕರ್ಮ ಜಯಂತಿ ಪ್ರಯುಕ್ತ ಫೋಟೋ ಪೂಜೆಯನ್ನು 8.15 ಕ್ಕೆ ನೆರವೇರಿಸಲಾಗುವುದು ಎಂದು ತಿಳಿಸಿದ ಅವರು ಇದೇ ವೇಳೆ ಸಂಬಂಧಪಟ್ಟ ವಿವಿಧ ಇಲಾಖೆಯ ಮತ್ತು ಅಧಿಕಾರಿ ಸಿಬ್ಬಂದಿ ವರ್ಗದವರಿಗೆ ಕಾರ್ಯಕ್ರಮದಲ್ಲಿ ಯಾವುದೇ ಲೋಪದೋಷಗಳು ಆಗದಂತೆ ಮುನ್ನೆಚ್ಚರಿಕೆ ನಿಗಾ ವಹಿಸಬೇಕು ಎಂದು ತಿಳಿಸಿದರು.

# ಕ್ರೀಡೆಯಲ್ಲಿ ಸಾಧನೆಗೈದು ಕೀರ್ತಿ ಹೆಚ್ಚಿಸಿ: ಶಿವಶರಣಪ್ಪ



ವಾಡಿ: ಕ್ರೀಡೆಯಲ್ಲಿ ಪಾಲ್ಗೊಳ್ಳುವುದರಿಂದ ದೈಹಿಕ ಮತ್ತು ಮಾನಸಿಕ ಒತ್ತಡ ನಿವಾರಣೆಯಾಗಿ ಸದೃಢ ಬದುಕು ಕಟ್ಟಿಕೊಳ್ಳಬಹುದಾಗಿದೆ ಎಂದು ತಾಲೂಕು ದೈಹಿಕ ಶಿಕ್ಷಣಾಧಿಕಾರಿ ಶಿವಶರಣಪ್ಪ ಮಂತಾಳೆ ಹೇಳಿದರು.

ಪಟ್ಟಣದ ಹೊರವಲಯದ ನ್ಯೂಟನ್ ಪ್ರದೇಶದಲ್ಲಿ ಸೋಮವಾರ 2024–25ನೇ ಸಾಲಿನ ಸಾರ್ವಜನಿಕ ಶಿಕ್ಷಣ ಇಲಾಖೆ ಆಯೋಜಿಸಿದ್ದ ನಾಲವಾರ ವಲಯ ಮಟ್ಟದ ಕ್ರೀಡಾಕೂಟ ಸ್ಪರ್ಧೆಯ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ನಮ್ಮ ದೈಹಿಕ ಹಾಗೂ ಮಾನಸಿಕ ಸದೃಢತೆಗೆ ಕ್ರೀಡೆಗಳು ತುಂಬಾ ಸಹಕಾರಿಯಾಗಲಿವೆ. ಕ್ರೀಡೆಯಿಲ್ಲದಿದ್ದರೆ ದೇಹ ಅನಾರೋಗಕ್ಕೆ ತುತ್ತಾಗುತದೆ.

ಮಕ್ಕಳು ಪಾಠ, ಪ್ರವಚನದೊಂದಿಗೆ ಆಟಕ್ಕೂ ಅಷ್ಟೇ ಮಹತ್ವ ನೀಡಬೇಕು. ಕ್ರೀಡಾಂಗಣದಲ್ಲಿ ಮಾತ್ರ ಕ್ರೀಡಾಪಟುಗಳು ವಿರೋಧಿಗಳು ಹೊರಗಡೆ ಹೋದಾಗ ಎಲ್ಲರೂ ಸ್ನೇಹಿತರೆಂದು ತಿಳಿಯಬೇಕು ಎಂದು ಮಕ್ಕಳಿಗೆ ಕಿವಿ ಮಾತು ಹೇಳಿದರು.

ಸೋಲು ಗೆಲವು ಒಂದೇ ನಾಣ್ಯದ ಎರಡು ಮುಖಗಳು ಇದ್ದಂತೆ. ಸೋತಾಗ ಯಾರೂ ಎದೆಗುಂದದೆ ಸೋಲನ್ನು ಒಂದು ಸವಾಲಾಗಿ ಸ್ವೀಕರಿಸಿ ಗೆಲ್ಲುವ ಪ್ರಯತ್ನ ಮಾಡಬೇಕು ಸೋಲೆ ಗೆಲುವಿನ ಸೋಪಾನ ಎಂದು ಅರಿಯಬೇಕು ಎಂದರು.

ಸರ್ಕಾರಿ ನೌಕರ ಸಂಘದ ತಾಲೂಕು ಉಪಾಧ್ಯಕ್ಷ ವೆಂಕಟೇಶ್, ಗ್ರೇಡ್1.ದೈಹಿಕ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ದೇವಿಂದ್ರ ರೆಡ್ಡಿ ದುಗುನೂರ್, ಡಾ.ಅಂಬೇಡ್ಕರ್ ವಸತಿ ಶಾಲೆಯ ಪ್ರಾಂಶುಪಾಲ ಉದಯ ಧರೆಣ್ಣನವರ್, ಮುರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲ ಶಂಕರ್ ರಾಠೋಡ, ಕಿತ್ತೂರ್ ರಾಣಿ ಚೆನ್ನಮ್ಮ ವಸತಿ ಶಾಲೆಯ ಪ್ರಾಂಶುಪಾಲಕಿ ಕರುಣಾದೇವಿ, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಉಪಾಧ್ಯಕ್ಷೆ ಸ್ವರ್ಣಲತಾ ರೆಡ್ಡಿ, ಅಲಹಳ್ಳಿ ಸರಕಾರಿ ಪ್ರೌಢ ಶಾಲೆಯ ಮುಖ್ಯಶಿಕ್ಷಕ ಚಂದ್ರಮಪ್ಪ ಅಮನಗಡ್ಡಿ, ಅಬ್ದುಲ್ ಸಲಿಂ, ವಾಡಿ ವಲಯ ಸಿಆರ್‌ಪಿ ಸೂರ್ಯಕಾಂತ್ ದಿಗ್ಗಾವ್, ನಾಲವಾರ ವಲಯ ಸಿಆರ್‌ಪಿ ಸಂಜೀವ ಕುಮಾರ್, ದೈಹಿಕ ಶಿಕ್ಷಕ ವೀರಭದ್ರಪ್ಪ ಗುರುಮಠಕಲ್, ನಿಲಯ ಪಾಲಕ ನಾಗಪ್ಪ ಪೂಜಾರಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು. ದೈಹಿಕ ಶಿಕ್ಷಕ ಶ್ರೀನಾಥ ಹಿರಗುಂಡ ನಿರೂಪಿಸಿ, ವಂದಿಸಿದರು.

ಕ್ರೀಡಾಪಟುಗಳಿಗೆ ಕ್ರೀಡಾ ಪ್ರತಿಜ್ಞೆ ಬೋಧಿಸಲಾಯಿತು. ನಂತರ ವಿವಿಧ ಪ್ರೌಢ ಶಾಲೆಯ ಮಕ್ಕಳಿಂದ ಕಬ್ಬಡ್ಡಿ, ಖೊ, ಖೊ, ಥ್ರೋಬಾಲ್ ವಾಲಿಬಾಲ, ರನ್ನಿಂಗ್, ಉದ್ದ ಜಿಗಿತ, ಎತ್ತರ ಜಿಗಿತ ರೋಚಕ ಕ್ರೀಡೆಗಳು ಜರುಗಿದವು.

# ಜನಪದವು ಮನಸ್ಸುಗಳು ಒಂದುಗೂಡಿಸಿ ಸಮೃದ್ಧ ಸಮಾಜ ಕಟ್ಟುತ್ತದೆ: ಅಟ್ಟೂರ



**ಕಲಬುರಗಿ:** ಗ್ರಾಮೀಣ ಭಾಗದ ಜನರು ಜನಪದ ಸಾಹಿತ್ಯದಿಂದ ಒಡೆದ ಮನಸ್ಸುಗಳು ಒಂದುಗೂಡಿಸಿ ಉತ್ತಮ ಸಮಾಜ ಕಟ್ಟುತ್ತಾರೆ ಎಂದು ಕನ್ನಡ ಜಾನಪದ ಪರಿಷತ್ ಕಲಬುರಗಿ ತಾಲುಕಾ ಉತ್ತರ ವಲಯ ಅಧ್ಯಕ್ಷರಾದ ನ್ಯಾಯವಾದಿ ಹಣಮಂತರಾಯ ಎಸ್ ಅಟ್ಟೂರ ಹೇಳಿದರು.

ಆಳಂದ ತಾಲೂಕಿನ ಝುಳಕಿ (ಬಿ) ಗ್ರಾಮದಲ್ಲಿ ಸೋಮವಾರ ವಿಶ್ವ ಜಾನಪದ ದಿನಾಚರಣೆಯ ನಿಮಿತ್ಯ ಕನ್ನಡ ಜಾನಪದ ಪರಿಷತ್ ಕಲಬುರಗಿ ತಾಲೂಕ ಉತ್ತರ ವಲಯದಿಂದ ಹಮ್ಮಿಕೊಂಡ ಜನಪದ ಕಲಾವಿದರಿಗೆ ಗೌರವ ಸನ್ಮಾನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ಜನಪದವು ಒಬ್ಬರಿಂದ ಮತ್ತೊಬ್ಬರಿಗೆ ನಿರಂತರ ಚಲಿಸುವ ಮೂಲಕ ಒಳ್ಳೆಯ ಸಾಹಿತ್ಯ ಹುಟ್ಟುತ್ತದೆ. ಜನಪದ ಕಲಾವಿದರು ಅಕ್ಷರದ ಜ್ಞಾನ ಕಡಿಮೆಯಿದ್ದರೂ ಸಂಸ್ಕಾರದ ಜ್ಞಾನಿಗಳಾಗುರುತ್ತಾರೆ.

ಇಂತಹ ಜ್ಞಾನದಿಂದ ನಾನು ನಂದು ಎನ್ನುವ ಭ್ರಾಂತಿ ನೀಗಿಸಿ ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಕಾರ್ಯ ಮಾಡುತ್ತಾರೆ. ಇಂತಹ ಕಲಾವಿದರು ಸಮೃದ್ಧ ಸಮಾಜದ ಆಸ್ತಿ ಯಾಗಿದ್ದಾರೆ ಎಂದು ಮಾರ್ಮಿಕವಾಗಿ ನುಡಿದರು. ಗ್ರಾಮದ ಹಿರಿಯ ಮುತ್ಸದ್ದಿಯಾದ ಭಗವಂತರಾವ ಮುನ್ನಳಿ ಕಾರ್ಯಕ್ರಮ ಉದ್ಘಾಟಿಸಿದರು. ವೇದಿಕೆಯ ಮೇಲೆ ದಳಪತಿಯಾದ ಶರಣಬಸಪ್ಪ ಪಿ ಪಾಟೀಲ, ಗ್ರಾಮ ಪಂಚಾಯತಿ ಸದಸ್ಯರಾದ ಸೀತಾರಾಮ ಜಮಾದಾರ, ಸುಗಲಾಬಾಯಿ ಕಾಳೆ, ಹಾಗೂ ಯುವ ಮುಖಂಡರಾದ ಶರಣಬಸಪ್ಪ ವೈ ಪೊಲೀಸ ಪಾಟೀಲ, ಭೋಗೇಶ ಡಿ. ಬಿರಾದಾರ, ಭೋಗೇಶ ಪಾಟೀಲ ಇತರರು ಉಪಸ್ಥಿತರಿದ್ದರು. ಇದೆ ಸಂದರ್ಭದಲ್ಲಿ ಯಾವುದೇ ಪ್ರಚಾರ ಬಯಸದೆ ಹಲವಾರೂ ದಶಕಗಳಿಂದ ನಿರಂತರ ಸೇವೆ ಮಾಡುತ್ತಿರುವ ಝುಳಕಿ (ಬಿ) ಗ್ರಾಮದ ಹಿರಿಯ ಜನಪದ ಕಲಾವಿದರಾದ ಬಸವಂತರಾವ ಬಿರಾದಾರ, ಭೋಗೇಶ ನಾವದಗಿ, ದೇವಿದಾಸ ಕುಲಕರ್ಣಿ,ಮಾಣಿಕ ಪೂಜಾರಿ,ಗಂಗಾಧರ ಅಂಕಲಗಿ, ಯುವ ಕಲಾವಿದರಾದ ನಾಗೇಶ ಪಡಶೆಟ್ಟಿ, ಶರಣಬಸಪ್ಪ ಮಡಿವಾಳ, ಚಲಗೇರಿ ಗ್ರಾಮದ ಜನಪದ ಕಲಾವಿದ ಚನ್ನಪ್ಪ ಬಾಲ್ದೆ ಅವರಿಗೆ ವಿಶೇಷವಾಗಿ ಗೌರವಿಸಿ ಸನ್ಮಾನ ಪತ್ರ ನೀಡಲಾಯಿತು. ಕಾರ್ಯಕ್ರಮದಲ್ಲಿ ವಿಜಯಕುಮಾರ ಪೂಜಾರಿ, ಶರಣಬಸಪ್ಪ ಎನ. ಪಾಟೀಲ, ಮಲ್ಲಿನಾಥ ನಾವದಗಿ, ಭೀಮಾಶಂಕರ ಕೊಡಲಹಂಗರಗಿ, ಶರಣಗೌಡ ಪಾಟೀಲ ನಿಂಬಾಳ, ವೀರಣ್ಣ ಖೇಳಗಿ, ಗುಂಡೇರಾಯ ನಾವದಗಿ, ಭೋಗೇಶ ಬೋರಳ್ಳಿ, ಚಂದಣ್ಣಾ ಚಿತಲಿ ಸೇರಿದಂತೆ ಗ್ರಾಮದ ಹಾಗೂ ಸುತ್ತಮುತ್ತಲಿನ ಗ್ರಾಮದ ಅನೇಕ ಜನರು ಭಾಗವಹಿಸಿದ್ದರು.

# ವಿದ್ಯಾರ್ಥಿ ಹಂತದಲ್ಲೇ ಆರೋಗ್ಯದ ಅರಿವು ತಂದುಕೊಳ್ಳಿ: ಜಾಧವ



ಆಳಂದ: ಶಾಲಾ ಹಂತದಲ್ಲೇ ವಿದ್ಯಾರ್ಥಿಗಳು ಆರೋಗ್ಯದ ಕುರಿತಾದ ಅರಿವು ತಂದುಕೊಳ್ಳುವ ಮೂಲಕ ಆರೋಗ್ಯವಂತ ಮತ್ತು ಸದೃಢ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕು ಎಂದು ಬೆಳಮಗಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಚಾರ್ಯ ಪ್ರಾಚಾರ್ಯ ದೇವರಾಜ ಜಾಧವ ಹೇಳಿದರು.

ತಾಲೂಕಿನ ಬೆಳಮಗಿ ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ನರೋಣಾ ಸಮುದಾಯ ಆರೋಗ್ಯ ಕೇಂದ್ರ ಆಯೋಜಿಸಿದ್ದ ಹದಿಹರೆಯದ ಆರೋಗ್ಯ ಮತ್ತು ಕ್ಷೇಮ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳ ಆರೋಗ್ಯ ರಕ್ಷಣೆಗಾಗಿ ಆರೋಗ್ಯ ಇಲಾಖೆಯಿಂದ ಸರ್ಕಾರದ ಮಹತ್ವದ ಹಲವು ಕಾರ್ಯಕ್ರಮಗಳ ಜಾರಿಗೆತಂದಿದೆ.ಇದರಸದ್ಬಳಕೆಯಾಗಬೇಕು. ಇಂದಿನ ಯುವಕರೇ ನಾಳೆಯ ಪ್ರಜೆಗಳು ಎನ್ನುವ ಹಾಗೆ ಈ ಹದಿ ಹರಿಯದ ಮಕ್ಕಳಲ್ಲಿ ಮಾನಸಿಕ, ಬೌದ್ಧಿಕ ಮತ್ತು ಶಾರೀರಿಕವಾಗಿ ಪ್ರತಿಯೊಂದು ಕೂಡ ಒಂದು ಬೆಳವಣಿಗೆ ಹಂತವಾಗಿರುತ್ತದೆ. ಈ ಹಂತದಲ್ಲಿ ಸಕಾಲಕ್ಕೆ ಸೇವೆ ಒದಗಿಸುವ ಸರ್ಕಾರದ ಸ್ನೇಹ ಕ್ಲಿನಿಕ್ ಸೇವಾ ಲಾಭ ಪಡೆದುಕೊಳ್ಳಬೇಕು ಎಂದರು.

ಆರೋಗ್ಯ ಕೇಂದ್ರದ ಆಪ್ತ ಸಮಾಲೋಚಕ ಚಂದ್ರಕಾಂತ್ ಕೊರೆ ಅವರು ಮಾತನಾಡಿ, ಪ್ರತಿ ಗುರುವಾರ ಮತ್ತು ಶನಿವಾರ ಸಮುದಾಯ ಆರೋಗ್ಯ ಕೇಂದ್ರದಲ್ಲಿ ತೆರೆಯುವ ಸ್ನೇಹ ಕ್ಲಿನಿನಲ್ಲಿ ಹೆಣ್ಣುಮಕ್ಕಳಿಗೆ ಉಚಿತವಾಗಿ ನೀಡುವ ಶುಚಿತ್ವಗಳನ್ನು ನೀಡಲಾಗುತ್ತದೆ, ಅಗತ್ಯ ಉಳ್ಳುವರು ಪಡೆಯಬೇಕು. ರಕ್ತ ಹೀನತೆಯಿಂದ ಬಳಲುವ ವಿದ್ಯಾರ್ಥಿಗಳಿಗೆ ಕಬ್ಬಿಣಾಂಶ ಮಾತ್ರೆಗಳು ನೀಡಲಾಗುತ್ತದೆ. ವೈಯುಕ್ತಿಕವಾಗಿ ಮಾನಸಿಕ, ಬೌದ್ಧಿಕ ಮತ್ತು ಶಾರೀರಿಕ ಸಮಸ್ಯೆಗಳನ್ನು ನಿವಾರಣೆಗೆ ಸಲಹೆ ಸೂಚನೆಗಳನ್ನು ನೀಡಲಾಗುತ್ತಿದೆ. ಇದರ ಸದ್ಬಳಕೆಯನ್ನು ಪಡೆದುಕೊಳ್ಳಬೇಕು ಎಂದು ಹೇಳಿದರು.

ಹದಿಹರಿಯದವರಿಗೆ ಸೆಂಟ್ರಿ ನೆಪ್ಕಿನ ಬಳಕೆಯ ಹಾಗೂ ಉಪಯೋಗದ ಅರಿವು ಹೊಂದಿ ಋತುಸಾವ್ರ ನೈರ್ಮಲ್ಯದ ಕುರಿತು ಅರಿವು ತಂದುಕೊಳ್ಳಬೇಕು. ಜೊತೆಗೆ ಪೌಷ್ಟಿಕಂಶದ ಕೊರತೆ ಬಗ್ಗೆ ಮಾನಸಿಕ ಆರೋಗ್ಯದ ಸಮಸ್ಯೆಗಳ ಕುರಿತು ಲೈಂಗಿಕ ಮತ್ತು ಸಂತಾನೋತ್ಪತ್ತಿಯ ಸಂಬಂಧಿಯ ಸಮಸ್ಯೆಗಳು ಋತುಚಕ್ರದ ಸಂಬಂಧಿಸಿದ ಹಾಗೂ ಶಂಕುಗಳ ನಿವಾರಣೆ ಬಗ್ಗೆ ಸಾಂಕ್ರಮಿಮಿಕ ರೋಗಗಳ ಬಗ್ಗೆ ಬಾಲ್ಯ ವಿವಾಹದ ಬಗ್ಗೆ ಹಾಗೂ ಮಿಷನ್ ಸುರಕ್ಷೆ ಬಗ್ಗೆ ತುರ್ತು ಸಂದರ್ಭದಲ್ಲಿ 112ಮತ್ತು 1098 ಉಚಿತ ಸಹಾಯವಾಣಿ ದೂರವಾಣಿ ಸಂಖ್ಯೆಗೆ ಸಂಪರ್ಕಿಸಬೇಕು ಎಂದು ಹೇಳಿದರು.

ಇನ್ನೋರ್ವ ಆಪ್ತಸಮಾಲೋಚಕ ದತ್ತು ಪೂಜಾರಿ ಮಾತನಾಡಿ, ಕ್ಷಯ ರೋಗದ ಕುರಿತು ಸಾಂಕ್ರಮಿಕ ಅಸಂಕ್ರಾಮಿಕ ರೋಗಗಳು ಕುರಿತು ಆನೇಕಾಲ ರೋಗ, ಢೇಂಘಿ, ಮಲೇರಿಯಾ, ಚಿಕಗುನ್ಯ ಮತ್ತು ಎಚಐವಿ ಏಡ್ಸ್ ಕುರಿತು ಮುಂಜಾಗ್ರತೆ ವಹಿಸುವಂತೆ ಸೂಚನೆ ನೀಡಿದರು.

# ಭವಾನಿ ನಗರದದಲ್ಲಿ ಅದ್ದೂರಿ ಪುರಾಣ ಮಂಗಲೋತ್ಸವ



ಕಲಬುರಗಿ: ಶ್ರಾವಣ ನಿಮಿತ್ತ ಭವಾನಿ ನಗರದ ಶ್ರೀಗುರು ಚನ್ನವೀರೇಶ್ವರ ಮಠದಲ್ಲಿ ತಿಂಗಳ ನಡೆದ ಮುಗಳಖೋಡದ ಶ್ರೀ ಯಲ್ಲಾಲಿಂಗ ಮಹಾರಾಜರ ಪುರಾಣ ಮಹಾಮಂಗಲೋತ್ಸವ ಸೋಮವಾರ ಸಹಸ್ರಾರು ಭಕ್ತರ ಜೈಘೋಷಣೆಗಳ ಮಧ್ಯೆ ಅದ್ದೂರಿ ಪಲ್ಲಕ್ಕಿ ಉತ್ಸವದೊಂದಿಗೆ ಸಂಪನ್ನಗೊಂಡಿತು.

ಮಠದ ಪೀಠಾಪತಿ ಶ್ರೀ ಗುರುಪಾದಲಿಂಗ ಶಿವಯೋಗಿಗಳ ನೇತೃತ್ವದಲ್ಲಿ ಬೆಳಗ್ಗೆ ಶ್ರೀ ಚನ್ನವೀರ ಶಿವಯೋಗಿಗಳ ಕರ್ತೃ ಗದ್ದುಗೆಗೆ ಮಹಾರುದ್ರಾಭಿಷೇಕ, ಸಹಸ್ರಾ ಬಿಲ್ವಾರ್ಚನೆ, ಮಹಾ ಮಂಗಳಾರುತಿ ನಂತರ ಷಟಸ್ಥಲ ಧ್ವಜಾರೋಹಣ ನೆರವೇರಿಸಲಾಯಿತು.

ನಂತರನಡೆದಪುರಾಣಮಂಗಲೋತ್ಸವಕಾರ್ಯಕ್ರಮದಲ್ಲಿ ವೈದ್ಯಕೀಯ ಸಚಿವ ಡಾ. ಶರಣಪ್ರಕಾಶ ಪಾಟೀಲ್ ಮಾತನಾಡಿ, ನಮ್ಮ ಕಲ್ಯಾಣ ಕರ್ನಾಟಕ ಭಾಗಕ್ಕೆ ಮಠ ಮಾನ್ಯಗಳ ಕೊಡುಗೆ ಅಪಾರವಾಗಿದೆ. ಜನರಲ್ಲಿ ನಮ್ಮ ಧಾರ್ಮಿಕತೆ, ಸಂಸ್ಕೃತಿಯನ್ನು ಬಿತ್ತುವಂತಹ ಕಾರ್ಯ ಮಠಗಳು ಮಾಡುತ್ತಿವೆ. ಈ ನಿಟ್ಟಿನಲ್ಲಿ ಮುತ್ಯಾನ ಬಬಲಾದ ಶ್ರೀ ಗುರುಪಾದಲಿಂಗ ಶಿವಯೋಗಿಗಳ ಕಾರ್ಯ ಎಲ್ಲರಿಗೂ ಮಾದರಿಯಾಗಿದೆ ಎಂದರು.

ಮಕ್ತಂಪುರ ಗದ್ದುಗೆ ಮಠದ ಶ್ರೀ ಚರಲಿಂಗ ಸ್ವಾಮೀಜಿ ಮಾತನಾಡಿ, ಲಿಂ. ಶ್ರೀ ಚನ್ನವೀರ ಶಿವಯೋಗಿಗಳು ಮನುಕುಲ ಉದ್ಧಾರಕರಾಗಿದ್ದಾರೆ. ತಮ್ಮ ಬಳಿಬಂದಂತಹ ಜನರ ಕಷ್ಟವನ್ನು ಬಗೆಹರಿಸಿದ ಮಹಾಮಹಿಮರಾಗಿದ್ದಾರೆ ಎಂದರು.

ಚನ್ನವೀರ ನಗರದಿಂದ ಆಗಮಿಸಿದ ಪಲ್ಲಕ್ಕಿಯಲ್ಲಿ ಶ್ರೀ ಲಿಂ. ಗುರು ಚನ್ನವೀರ ಶಿವಯೋಗಿಗಳ ಭಾವಚಿತ್ರ ಇಟ್ಟ ನಂತರ ಉತ್ಸವಕ್ಕೆ ಚಾಲನೆ ದೊರೆಯಿತು. ಶ್ರೀಮಠದಿಂದ ಪ್ರಾರಂಭವಾಗಿ ರಾಮನಗರ ಕ್ರಾಸ್, ಭವಾನಿನಗರ, ಪೂಜಾರಿ ಮಠದ ವೃತ್ತ, ಕಾಕಡೆ ಚೌಕ್ ಮಾರ್ಗವಾಗಿ ಸಂಜೆ ವೇಳೆಗೆ ಮಠಕ್ಕೆ ತಲುಪಿತು. ನಂತರ ಪೂಜಾ ಕೈಂಕರ್ಯ, ಮಹಾಮಂಗಳಾರುತಿ ಮಾಡಿ, ಮಂಗಲೋತ್ಸವ ಸಂಪನ್ನವಾಯಿತು.

ಪುರಾಣದಲ್ಲಿ ಸೇವೆ ಸಲ್ಲಿಸಿದ ಭಕ್ತರಿಗೆ ಹಾಗೂ ಪುರಾಣಿಕರಾದ ವೇದಮೂರ್ತಿ ಮಡಿವಾಳಯ್ಯ ಶಾಸ್ತ್ರಿ, ಗವಾಯಿ ಯಶ್ವಂತ ಬಡಿಗೆರ, ತಬಲಾವಾದಕ ರಾಜಶೇಖರ ಕಟ್ಟಿಸಂಗಾವಿ ಸೇರಿ ಮಠದಲ್ಲಿ ಒಂದು ತಿಂಗಳ ಪರ್ಯಂತ ಸೇವೆ ಸಲ್ಲಿಸಿದ ಭಕ್ತರನ್ನು ಪೂಜ್ಯ ಶ್ರೀ ಗುರುಪಾದಲಿಂಗ ಶಿವಯೋಗಿಗಳು ಸನ್ಮಾನಿಸಿದರು. ನಂತರ ಭಕ್ತರಿಂದ ಶ್ರೀಗಳ ತುಲಾಭಾರ ನೆರವೇರಿತು.

ಮಕ್ತಂಪುರ ಶ್ರೀ ಶಿವಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಕಾಂಗ್ರೆಸ್ ಮುಖಂಡ ನೀಲಕಂಠರಾವ ಮೂಲಗೆ, ಬಿಜೆಪಿ ನಗರಾಧ್ಯಕ್ಷ ಚಂದು ಪಾಟೀಲ್, ಡಿಸಿಸಿ ಬ್ಯಾಂಕ್ ನಿರ್ದೇಶಕ ಶರಣಬಸಪ್ಪ ಪಾಟೀಲ್ ಅಷ್ಟಗಿ, ಪಾಲಿಕೆ ಸದಸ್ಯೆ ಗಂಗಮ್ಮ ಮುನ್ನೊಳ್ಳಿ, ಬಸವರಾಜ ಮುನ್ನೊಳ್ಳಿ, ಶಾಂತು ದುಧನಿ, ಸುಖದೇವ ಪೂಜಾರಿ, ಸಂತೋಷ ಸಂಗೋಳ್ಳಿ, ರವಿ ಮಹಾಗಾವ, ಮಾಣಿಕರಾವ ಮಿರಕಲ್, ವಿಠ್ಠಲರಾವ ಗೋಗಿ, ಶಿವಶರಣಪ್ಪ ಗೋಗಿ, ಸಿದ್ದು ಸಂಗೋಳಗಿ, ಶಿವಶರಣಯ್ಯ ಸ್ವಾಮಿ ಕೊಟ್ಟರಗಿ, ಚಂದ್ರಕಾಂತ ಹಸರಗುಂಡಗಿ, ಶಾಂತವೀರಯ್ಯ ಸ್ವಾಮಿ, ರೇವಣಸಿದ್ದಯ್ಯ ಶಾಸ್ತ್ರಿ, ರಾಜು ರೆಡ್ಡಿ, ಶರಣಪ್ಪ ರಾವೂರು, ಸಿದ್ದು ತಾಳಮಡಗಿ, ಶರಣು ವರನಾಳ, ಸುನಿಲ ಪೂಜಾರಿ, ಬಸವರಾಜ ಬುಕ್ಕಾ, ರಾಜು ಜಾಬಶೆಟ್ಟಿ, ಚನ್ನವೀರ ಹಿರೇಮಠ ಸೇರಿ ಇತರರಿದ್ದರು.

ಜಂಗಮ ವಟುಗಳಿಗೆ ಅಯ್ಯಾಚಾರ

ಶ್ರಾವಣ ಮಾಸದ ನಿಮಿತ್ತ ಶ್ರೀಗುರು ಚನ್ನವೀರೇಶ್ವರ ಮಠದಲ್ಲಿ ಭಾನುವಾರ ಜಂಗಮ ವಟುಗಳಿಗೆ ಸಾಮೂಹಿಕ ಆಯ್ಯಾಚಾರ ಹಾಗೂ ಲಿಂಗದೀಕ್ಷೆ ಕಾರ್ಯಕ್ರಮ ನಡೆಯಿತು. ಅಂಬೆಜೋಗಾಯಿ ಶ್ರೀ ಶಂಭುಲಿಂಗ ಶಿವಾಚಾರ್ಯರು ಹಾಗೂ ಪಾಳಾದ ಗುರುಮೂರ್ತಿ ಶಿವಾಚಾರ್ಯರು ವಟುಗಳಿಗೆ ಉಪದೇಶ ನೀಡಿದರು. ಶ್ರೀ ಗುರುಪಾದಲಿಂಗ ಶಿವಯೋಗಿಗಳು ನೇತೃತ್ವ ವಹಿಸಿದ್ದರು. ಶ್ರೀ ಗುರು ಚನ್ನವೀರೇಶ್ವರ ವೇದ ಜ್ಯೋತಿಷ್ಯ ಪಾಠಶಾಲೆ ವತಿಯಿಂದ ವೈದಿಕ ಕಾರ್ಯಕ್ರಮ ನಡೆಯಿತು.

## ಕ್ರೀಡಾಕೂಟ: ಗೋಲಗೇರಿ ಶಾಲೆ ವಿಜಯೋತ್ಸವ



ಗೋಲಗೇರಿ: ಸಿಂದಗಿ ನಗರದ ಅಂಬೇಡ್ಕರ್ ಕ್ರೀಡಾಂಗಣದಲ್ಲಿ ನಡೆದ ಪ್ರಾಥಮಿಕ ಶಾಲೆಗಳ ವಲಯ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿದ ಗೋಲಗೇರಿ ಏಃಒಕಖ ಶಾಲೆಯ ಮಕ್ಕಳು ಗುಂಪು ಆಟಗಳಾದ ಕಬಡ್ಡಿ ಆಟದಲ್ಲಿ ಪ್ರಥಮ ಹಾಗೂ ರಿಲೇ ಓಟದಲ್ಲಿ ಪ್ರಥಮ ಹಾಗೂ ವೈಯಕ್ತಿಕ ಆಟಗಳಾದ ಚಕ್ರ ಎಸೆತದಲ್ಲಿ ಪ್ರಥಮ ಹಾಗೂ ಎತ್ತರ ಜಿಗಿ- ತದಲ್ಲಿ ಪ್ರಥಮ ಸ್ಥಾನ ಗಳಿಸಿ ತಾಲ್ಲೂಕು ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ. ಆಯ್ಕೆಯಾದ ವಿದ್ಯಾರ್ಥಿಗಳಿಗೆ ಗೋಲಗೇರಿ ಸಮೂಹ ಸಂಪನ್ಮೂಲ ವ್ಯಕ್ತಿ ಶರಣು ಚಟ್ಟಿ, ಮುಖ್ಯ ಗುರು ಪಿ.ಎಮ್.ಶೇಖ್, ಗುರುಬಸಯ್ಯ ಮಠ, ಯಮನಪ್ಪ ಗುಡಿಮನಿ, ಗ್ರಾಮಸ್ಥರು ಹಾಗೂ ಶಿಕ್ಷಣ ಪ್ರೇಮಿಗಳಾದ ಮಲ್ಕಣ್ಣ ಗಡೆಗೆನ್ನವರ, ರುಕುಮ್ಮುದ್ದಿನ ಪಟೇಲ ಹಳಿಮನಿ, ಮಡಿವಾಳ ನಾಯ್ಕೋಡಿ ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

## ಸಾಹಿತ್ಯ ಅಕಾಡೆಮಿ ಸದಸ್ಯ ಡಾ.ಗೊಳಸಂಗಿ ಗೆ ಸನ್ಮಾನ



ವಿಜಯಪುರ: ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಾದ ಹಿರಿಯ ಸಾಹಿತಿ ಡಾ. ಅರ್ಜುನ ಗೊಳಸಂಗಿ ಅವರಿಗೆ ಶಿವಶರಣ ಶೈಕ್ಷಣಿಕ, ಗ್ರಾಮೀಣಾಭಿವೃದ್ಧಿ ಹಾಗೂ ವಿವಿಧೋದ್ದೇಶಗಳ ಸಂಸ್ಥೆ (ರಿ) ವತಿಯಿಂದ ಸಂಸ್ಥೆಯ ನೂತನ ಕಚೇರಿಯಲ್ಲಿ ಸಾಹಿತಿ , ಪತ್ರಕರ್ತ ಕಲ್ಲಪ್ಪ ಶಿವಶರಣ ವಿರಚಿತ ಕಲ್ಲು ಮನಸ್ಸು ಕೃತಿ ನೀಡಿ ಹಾಗೂ ಶಾಲು ಹೊದಿಸಿ ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಶಿವಶರಣ ಶೈಕ್ಷಣಿಕ, ಗ್ರಾಮೀಣಾಭಿವೃದ್ಧಿ ಹಾಗೂ ವಿವಿಧೋದ್ದೇಶಗಳ ಸಂಸ್ಥೆ ಅಧ್ಯಕ್ಷ ಕಲ್ಲಪ್ಪ ಶಿವಶರಣ, ತೆರಿಗೆ ಇಲಾಖೆಯ ಅಧಿಕಾರಿಗಳಾದ ಸುರೇಶ ಗೊಳಸಂಗಿ, ಹಿರಿಯ ಪತ್ರಕರ್ತ, ಸಾಹಿತಿ ಪರಶುರಾಮ ಶಿವಶರಣ, ಲಕ್ಷ್ಮಣ ಲೋಗಾಂವಿ, ಸಂಶೋಧಕ ಲಾಯಪ್ಪ ಇಂಗಳೆ, ಪತ್ರಕರ್ತ ಉಮೇಶ ಶಿವಶರಣ, ಸಾಗರ ಲಾಯದಗುಂದಿ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

## ಅಕ್ಕಮಹಾದೇವಿ ಮಹಿಳಾ ವಿವಿ: ಬಿ.ಎಡ್ ಫಲಿತಾಂಶ ಪ್ರಕಟ

ವಿಜಯಪುರ: ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವ ವಿದ್ಯಾಲಯದ 2023-24ರ ಶೈಕ್ಷಣಿಕ ವರ್ಷದ ಜುಲೈ 2024 ರಲ್ಲಿ ಜರುಗಿದ ಬಿ.ಎಡ್ ಕೋರ್ಸಿನ ತೃತೀಯ ಸೆಮಿಸ್ಟರ್ (ರೆಗ್ಯುಲರ್ ಮತ್ತು ಪುನರಾವರ್ತಿತ) ಫಲಿತಾಂಶವನ್ನು ದಿನಾಂಕ : 10-09-2024 ರಂದು ಪ್ರಕಟಿಸಲಾಗಿದೆ.ಸದರಿ ಫಲಿತಾಂಶವನ್ನು uucms.karnataka.gov.in ವೆಬ್ ಸೈಟ್ ನಲ್ಲಿ ನೋಡಬಹುದು ಎಂದು ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವರಾದ ಪ್ರೊ. ಹೆಚ್. ಎಂ. ಚಂದ್ರಶೇಖರ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ತಾಳ್ಮೆಯ ಕೊರತೆಯಿಂದ ಹೆಚ್ಚುತ್ತಿರುವ ಆತ್ಮಹತ್ಯೆ ಪ್ರಕರಣಗಳು :ಡಾ.ಸಂತೋಷ



ವಿಜಯಪುರ: ತಾಳ್ಮೆಯ ಕೊರತೆಯಿಂದಾಗಿ ಆತ್ಮಹತ್ಯೆ ಪ್ರಕರಣಗಳು ಹೆಚ್ಚಾಗುತ್ತಿವೆ ಎಂದು ಬಿ. ಎಲ್. ಡಿ. ಇ ಡೀಮ್ಡ್ ವಿಶ್ವವಿದ್ಯಾಲಯದ ಮನೋರೋಗ ತಜ್ಞ ಡಾ. ಸಂತೋಷ ರಾಮದುರ್ಗ ಹೇಳಿದ್ದಾರೆ.

ಮಂಗಳವಾರ ವಿಶ್ವ ಆತ್ಮಹತ್ಯೆ ತಡೆ ದಿನ ಮತ್ತು ಅದರ ಉಪಚಾರ ದಿನದ ಅಂಗವಾಗಿ ಬಿ. ಎಲ್. ಡಿ. ಇ ಸಂಸ್ಥೆಯ ಶ್ರೀ ಬಿ. ಎಂ. ಪಾಟೀಲ ನರ್ಸಿಂಗ್ ಮಹಾವಿದ್ಯಾಲಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರು ವಿಶೇಷ ಉಪನ್ಯಾಸ ನೀಡಿದರು.

ಕಾಲೇಜಿನ ಯುವಕ ಮತ್ತು ಯುವತಿಯರಲ್ಲಿ ಆತ್ಮಹತ್ಯೆ ಪ್ರಕರಣಗಳು ಹೆಚ್ಚಾಗುತ್ತಿವೆ. ತಾಳ್ಮೆಯ ಕೊರತೆ ಇದಕ್ಕೆ ಪ್ರಮುಖ ಕಾರಣವಾಗಿದ್ದು, ಯಾವ ವ್ಯಕ್ತಿ ಆತ್ಮಹತ್ಯೆಗಳ ಬಗ್ಗೆ ಹೆಚ್ಚಾಗಿ ಮಾತನಾಡುತ್ತಿರುತ್ತಾನೋ ಅಂಥವರ ಬಗ್ಗೆ ನಾವು ತೀವ್ರ ನಿಗಾ ವಹಿಸಬೇಕು. ಅಲ್ಲದೇ, ಅವರಿಗೆ ಆಯಾ ಸಂದರ್ಭಕ್ಕೆ ಅನುಗುಣವಾಗಿ ಸಮಾಲೋಚನೆ ನಡೆಸಿ ಸಲಹೆ ಸೂಚನೆ ನೀಡುವುದು ನಮ್ಮೆಲ್ಲರ ಜವಾಬ್ದಾರಿ ಎಂದು ಅವರು ಹೇಳಿದರು,

ಡಾ. ಗೌತಮಿ ಮಾತನಾಡಿ, ವಿಶ್ವಾದ್ಯಂತ ಪ್ರತಿವರ್ಷ ಸುಮಾರು ಏಳು ಲಕ್ಷ ಜನರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಇವರಲ್ಲಿ 1.60 ಲಕ್ಷ ಜನ ಭಾರತದಲ್ಲಿಯೇ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ನಾವೆಲ್ಲರೂ ಆತ್ಮಹತ್ಯೆಯ ಕುರಿತು ಮುಕ್ತವಾಗಿ ಚರ್ಚಿಸುವುದರಿಂದ ಇಂಥ ಪ್ರಕರಣಗಳನ್ನು ಕಡಿಮೆ ಮಾಡಬಹುದಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಚಾರ್ಯ ಡಾ. ಶಾಲ್ಮೋನ್ ಚೊಪಡೆ, ಮನೋರೋಗ ಶಾಸ್ತ್ರ ವಿಭಾಗದ ಮುಖ್ಯಸ್ಥ ನಜೀರ್ ಬಳಗಾರ, ಡಾ. ನಿಶಾಂತ್, ಸೌರಬ ಬಿರಾದಾರ, ನವೀನ ಚಿಟ್ಟಿ, ಮಹೇಂದ್ರಕುಮಾರ, ರಿಯಾಜ್, ಪೈಜಲ್, ಶಿಲ್ಪಾ ಬಳಗಾರ, ಅಪ್ಪನಗೌಡ ಪಾಟೀಲ, ಡಾ. ಅಮಿತಕುಮಾರ ಬಿರಾದಾರ ಮುಂತಾದವರು ಉಪಸ್ಥಿತರಿದ್ದರು.

## ಸೆ.11-12 ರಂದು ಅಕ್ಕಮಹಾದೇವಿ ವಿವಿಯಲ್ಲಿ ಮಾಧ್ಯಮ ಕಾರ್ಯಗಾರ

ವಿಜಯಪುರ: ಮೈಸೂರು ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಯುನಿಸೆಫ್ ಪ್ರಾಯೋಜಕತ್ವ ಮತ್ತು ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ಇವರ ಸಹಯೋಗದೊಂದಿಗೆ 'ಮಕ್ಕಳ ಹಕ್ಕುಗಳು, ರಕ್ಷಣೆ ಮತ್ತು ಆರೋಗ್ಯ' ಎಂಬ ವಿಷಯದ ಕುರಿತು ಮಾಧ್ಯಮ ಕಾರ್ಯಗಾರವನ್ನು ದಿ. 11 ಮತ್ತು 12 ರಂದು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮವನ್ನು ಬುಧವಾರ ಬೆಳಗ್ಗೆ 10.30 ಗಂಟೆಗೆ ಧಾರವಾಡದ ಕರ್ನಾಟಕ ಬಾಲ ವಿಕಾಸ ಅಕಾಡೆಮಿಯ ಅಧ್ಯಕ್ಷ ಸಂಗಮೇಶ ಬಬಲೇಶ್ವರ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಹೈದರಾಬಾದ್ ಯುನಿ ಸೆಫ್‌ನ ಪ್ರಸೂನ್ ಸೇನ್ ಭಾಗವಹಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆ ಯನ್ನು ಮಹಿಳಾ ವಿವಿಯ ಕುಲಪತಿ ಪ್ರೊ.ಬಿ.ಕೆ.ತುಳಸಿಮಾಲ ವಹಿಸಲಿದ್ದು, ಕುಲಸಚಿವ ಶಂಕರಗೌಡ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ.ಎಚ್.ಎಂ.ಚಂದ್ರಶೇಖರ ಉಪಸ್ಥಿತರಿರಲಿದ್ದಾರೆ. ತಾಂತ್ರಿಕ **ಗೋಷ್ಠಿಗಳು:** ಕಾರ್ಯಾಗಾರದ ಮೊದಲ ತಾಂತ್ರಿಕ ಗೋಷ್ಠಿಯಲ್ಲಿ 'ಮಕ್ಕಳ ಹಕ್ಕುಗಳು: ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಚೌಕಟ್ಟು ಮತ್ತು ಕಾನೂನುಗಳ' ಎಂಬ ವಿಷಯದ ಕುರಿತು ಕರ್ನಾಟಕ ಮಕ್ಕಳ ಹಕ್ಕುಗಳ ಸಂಯೋಜಕ ಡಾ. ವಾಸುದೇವ ಶರ್ಮಾ ತಮ್ಮ ವಿಚಾರವನ್ನು ಮಂಡಿಸಲಿದ್ದಾರೆ. ಎರಡನೇಯ ಗೋಷ್ಠಿಯಲ್ಲಿ ಯುನಿಸೆಫ್‌ನ ಆರೋಗ್ಯತಜ್ಞ ಡಾ. ಶ್ರೀಧರ ಪ್ರಹ್ಲಾದ ರೈವಂಕಿ 'ಮಕ್ಕಳ ಆರೋಗ್ಯ ಸಮಸ್ಯೆಗಳ ಮುನ್ನೋಟ: ಎನ್‌ಸಿಡಿಎಸ್ ಮತ್ತು ಮಾನಸಿಕ ಆರೋಗ್ಯ' ಎಂಬ ವಿಷಯದ ಕುರಿತುತಮ್ಮವಿಚಾರವನ್ನು ಮಂಡಿಸಲಿದ್ದಾರೆ. ದಿ.12 ರಂದು ನಡೆಯುವ ಕಾರ್ಯಗಾರದ ಮೂರನೇ ಗೋಷ್ಠಿಯಲ್ಲಿ 'ಮಕ್ಕಳ ಹಕ್ಕುಗಳು ಮತ್ತು ಮಾಧ್ಯಮಗಳ ವರದಿಗಾರಿಕೆ' ಎಂಬ ವಿಷಯದ ಕುರಿತು ಮೈಸೂರು ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥ ಪ್ರೊ. ಸಪ್ನಾ ಎಂ ಎಸ್ ತಮ್ಮ ವಿಚಾರವನ್ನು ಮಂಡಿಸಲಿದ್ದಾರೆ. ನಾಲ್ಕನೇ ಗೋಷ್ಠಿಯಲ್ಲಿ ಭಾರತೀಯ ಮಕ್ಕಳ ಪ್ರತಿಷ್ಠಾನ ಕಾರ್ಯಕ್ರಮ ಸಂಯೋಜಕಿ ಗೌರಿ ಅರಸು 'ಡಿಜಿಟಲ್ ಸುರಕ್ಷತೆ ಮತ್ತು ಮಕ್ಕಳು' ಎಂಬ ವಿಷಯದ ಕುರಿತು ಮಾತನಾಡಲಿದ್ದಾರೆ ಎಂದು .

ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥ ಪ್ರೊ. ಓಂಕಾರ ಕಾಕಡೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸೆ.17ಕ್ಕೆ ವಿಶ್ವಕರ್ಮ ಜಯಂತಿ ಅರ್ಥಪೂರ್ಣ ಆಚರಣೆಗೆ ನಿರ್ಧಾರ



ವಿಜಯಪುರ: ಜಿಲ್ಲಾಡಳಿತದ ವತಿಯಿಂದ ಸೆಪ್ಟೆಂಬರ್ 17ರಂದು ವಿಶ್ವಕರ್ಮ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಯಿತು. ವಿಶ್ವಕರ್ಮ ಜಯಂತಿಯ ಅಂಗವಾಗಿ ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ ಅವರ ಅಧ್ಯಕ್ಷತೆಯಲ್ಲಿ ನಗರದ ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಮಂಗಳವಾರ ನಡೆದ ಪೂರ್ವಭಾವಿ ಸಭೆಯಲ್ಲಿ, ಸೆ.17ರಂದು ಬೆಳಗ್ಗೆ 9.30ಕ್ಕೆ ಶ್ರೀ ಸಿದ್ದೇಶ್ವರ ದೇವಸ್ಥಾನದಿಂದ ವಿವಿಧ ಕಲಾತಂಡಗಳೊಂದಿಗೆ ವಿಶ್ವಕರ್ಮ ಅವರ ಭಾವಚಿತ್ರದ ಮೆರವಣಿಗೆ ಚಾಲನೆ ನೀಡಲಾಗುವುದು. ಮೆರವಣಿಗೆಯೂ ನಗರದ ಗಾಂಧಿ ವೃತ್ತ, ಬಸವೇಶ್ವರ ವೃತ್ತ, ಡಾ.ಬಿ.ಆರ್. ಅಂಬೇಡ್ಕರ ವೃತ್ತ, ಕನಕದಾಸ ವೃತ್ತದ ಮಾರ್ಗವಾಗಿ ನಗರದ ಕಂದಗಲ್ ಹನುಮಂತರಾಯ ರಂಗಮಂದಿರವರೆಗೆ ನಡೆಯಲಿದೆ.ಬೆಳಗ್ಗೆ10.30ಕ್ಕೆರಂಗಮಂದಿರದಲ್ಲಿ ವಿಶ್ವಕರ್ಮ ಜಯಂತಿ ವೇದಿಕೆ ಕಾರ್ಯಕ್ರಮ ಜರುಗಲಿದ್ದು, ಕಾರ್ಯಕ್ರಮದಲ್ಲಿ ಉಪನ್ಯಾಸ, ಸುಗಮಸಂಗೀತ ಕಾರ್ಯಕ್ರಮ ಹಮ್ಮಿಕೊಳ್ಳಲು ನಿರ್ಣಯಿಸಲಾಯಿತು. ಅಂದು ನಗರದ ವಿವಿಧ ವೃತ್ತಗಳಿಗೆ ಸ್ವಚ್ಛತೆ ಹಾಗೂ ದೀಪಾಲಂಕಾರಗೊಳಿಸುವಂತೆ ಮಹಾನಗರಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದರು.

ಶಿಷ್ಟಾಚಾರದಂತೆ ಆಮಂತ್ರಣ ಪತ್ರಿಕೆ ಮುದ್ರಿಸುವುದು, ವೇದಿಕೆ, ಕುಡಿಯುವ ನೀರು ವ್ಯವಸ್ಥೆ ಕಲ್ಪಿಸಲು ಸಂಬಧಿಸಿದ ಅಧಿಕಾರಿಗಳಿಗೆ ಸೂಚಿಸಲಾಯಿತು. ಸಭೆಯಲ್ಲಿ ವಿಜಯಪುರ ಗ್ರೇಡ್-2 ತಹಶೀಲ್ದಾರ ಐ. ಎಚ್. ತುಂಬಗಿ, ಮಹಾನಗರಪಾಲಿಕೆ ಉಪ ಆಯುಕ್ತ ವಾಯ್.ಎಸ್. ನಾರಾಯಣಕರ, ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರಾದ ಶಿವನಗೌಡ ಪಾಟೀಲ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಸಂತೋಷ ಭೋವಿ, ಪೂಜ್ಯಶ್ರೀ ಮಹೇಂದ್ರ ಸ್ವಾಮಿಗಳು, ಶ್ರೀಕಾಂತ ಕುಂದನಗಾರ, ಬಾಳು ಗಿರಗಾಂವಕರ, ಪ್ರಮೋದ ಬಡಿಗೇರ, ಈರಣ್ಣ ಪತ್ತಾರ, ಸಂತೋಷ ವಿಶ್ವಕರ್ಮ, ಪ್ರದೀಪ ಪತ್ತಾರ, ಮನೋಹರ ಪತ್ತಾರ, ಮಹೇಶ ಕೆಂದೂರ, ವಿನೋದ ಪತ್ತಾರ, ಮೌನೇಶ ಪತ್ತಾರ, ಮುಕುಂದ ಕುಂದನಗಾರ, ಶಾರದಾ ಪತ್ತಾರ, ಸುನಂದ ವಿಶ್ವಕರ್ಮ, ಮೀನಾ ಕುಂದನಗಾರ, ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಶ್ರೀಸಾಮಾನ್ಯರಿಗೆ ದನಿಯಾದ ಅಸಾಮಾನ್ಯ ಯುವಕ ಮಂಜುನಾಥ್ ತೋಟಗೇರ



ಅದು 2014ನೇ ಇಸವಿ. ಆಗತಾನೆ ಎಲ್ಲೆಡೆ ವಾಟ್ಸಪ್ ಕಾಲಿಟ್ಟಿದ್ದು ಜಿಲ್ಲಾ ಕೇಂದ್ರದಲ್ಲಿ ವಾಸವಾಗಿದ್ದ ಟ್ರ್ಯಾಕ್ಟರ್ ಶೋರೂಮ್ ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪದವೀಧರನಾದ ಉತ್ಸಾಹಿ ಯುವಕನೋರ್ವ ತನ್ನ ಪರಿಚಿತ ವಲಯದಸ್ನೇಹಿತರಗುಂಪೊಂದನ್ನುವಾಟ್ಸಪ್ ನಲ್ಲಿ ಕ್ರಿಯೇಟ್ ಮಾಡಿದ. ಸಾಮಾನ್ಯವಾಗಿ ಮೆಸೇಜ್ಗಳು, ವಿಡಿಯೋಗಳಿಂದ ಕೂಡಿದ ಗುಂಪುಗಳ ನಡುವೆ ರಕ್ತದಾನವನ್ನು ಮುಖ್ಯ ಉದ್ದೇಶವನ್ನಾಗಿಸಿಕೊಂಡು ಪ್ರಾರಂಭವಾದ ಈ ವಾಟ್ಸಪ್ ಗ್ರೂಪ್ ಮೂಲಕ ಹಲವಾರು ಜನ ಗರ್ಭಿಣಿಯರಿಗೆ, ಅಪಘಾತದಿಂದ ತೀವ್ರ ರಕ್ತಸ್ರಾವ ದಿಂದ ಬಳಲುತ್ತಿರುವವರಿಗೆ ಸೂಕ್ತ ಗುಂಪಿನ ರಕ್ತವನ್ನು ಅವಶ್ಯಕ ಸಮಯದಲ್ಲಿ ಪೂರೈಕೆ ಮಾಡುತ್ತಿದ್ದರು.

ಅದೊಂದು ದಿನ ಮುಂಜಾನೆ ತನ್ನ ಕೆಲಸದಲ್ಲಿ ನಿರತನಾಗಿದ್ದ ಈ ಉತ್ಸಾಹಿ ಯುವಕನನ್ನು ತುರ್ತಾಗಿ ಸರ್ಕಾರಿ ಆಸ್ಪತ್ರೆಗೆ ಬರಲು ಹೇಳಿದ ಆಸ್ಪತ್ರೆಯವರು ಆತ ಬಂದ ಕೂಡಲೇ ನೆನ್ನೆ ದಾಖಲಾದ ಗರ್ಭಿಣಿ ಸ್ತ್ರೀ ಹೆರಿಗೆಯಾಗಿದ್ದು ಆತನಿಂದಲೇ ಆಕೆಗೆ ಎಬಿ ನೆಗೆಟಿವ್ ರಕ್ತ ಪೂರೈಕೆ ಆಗಲು ಅನುಕೂಲವಾಗಿದ್ದನ್ನು ಹೇಳಿದರು. ಜವಾಬ್ದಾರಿ ಹೊರಬೇಕಾದ ಆಕೆಯ ಪತಿ ಅಲ್ಲೆಲ್ಲೋ ಕುಡಿದು ಬಿದ್ದಿರುವುದಾಗಿಯೂ ಅತ್ಯಂತ ವಿರಳವಾಗಿರುವ ಎಬಿ ನೆಗೆಟಿವ್ ರಕ್ತ ಪೂರೈಸಿ ಬಾಣಂತಿ ಮತ್ತು ಮಗುವಿನ ಜೀವ ಉಳಿಕೆಗೆ ಕಾರಣವಾದ ಆತನ ಕೈಯಲ್ಲಿ ಮಗುವನ್ನು ಇಟ್ಟು ಆತನೇ ಮಗುವಿಗೆ ಹೆಸ- ರಿಡಲು ಕೋರಿಕೊಂಡರು. ಕೊಂಚ ಸಂತಸ ಮತ್ತು ತುಸು ಆತಂಕ ಮಿಶ್ರಿತ ಭಾವ ದಿಂದ ಆತ ಕೈಯಲ್ಲಿರುವ ಹೆಣ್ಣುಮಗುವಿಗೆ ಅಂದು ಭಾನುವಾರವಾದ ಕಾರಣ ಭಾನು ಎಂದು ಹೆಸರಿಟ್ಟಾಗ ಎಲ್ಲರೂ ಚಪ್ಪಾಳೆ ತಟ್ಟಿ ಸಂತಸ ವ್ಯಕ್ತಪಡಿಸಿದರು. ಕಳೆದ ಮೂರು ನಾಲ್ಕು ವರ್ಷಗಳಿಂದ ಆ ಯುವಕನು ಮಾಡುತ್ತಿರುವ ಈ ರಕ್ತದಾನದ ವ್ಯವಸ್ಥೆಯ ಕೆಲಸ ಜೀವ ಉಳಿಸುವ ಮಹೋನ್ನತ ಕಾರ್ಯವು ಸಾಮಾಜಿಕ ಜಾಲತಾಣಗಳ ಮೂಲಕ ಎಲ್ಲೆಡೆ ಹರಡಿ 2016ರಲ್ಲಿ ಬಿ ಟಿವಿಯವರ 'ಭರವಸೆಯ ರಕ್ತದಾನಿ' ಎಂದು ಗುರುತಿಸಿ ಗೌರವಿಸಿದರೆ, 2017ರಲ್ಲಿ ಕೊಪ್ಪಳದ ಪಬ್ಲಿಕ್ ಟಿವಿಯವರು "ಪಬ್ಲಿಕ್ ಹೀರೋ"ಎಂದು ಕರೆದು ಗೌರವಿಸಿದರು. ಆತನೇ ಮಂಜುನಾಥ್ ತೋಟಗೇರ್.

ಮಂಜುನಾಥನ ತಂದೆ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು.ತಮ್ಮ ಮೊದಲ ಪತ್ನಿಯ ಮರಣ ನಂತರ ಇಬ್ಬರು ಗಂಡು ಮಕ್ಕಳನ್ನು ಜೋಪಾನ ಮಾಡಲು ಆಕೆಯ ತಂಗಿಯನ್ನೇ ಮದುವೆಯಾದರು. ಆಗ ಹುಟ್ಟಿದ ಮಂಜುನಾಥ್ ಗೆ ಮತ್ತೆ ಓರ್ವ ತಮ್ಮ ಮತ್ತು ತಂಗಿ ಜನಿಸಿದರು. ಯಾವುದಕ್ಕೂ ಕೊರತೆ ಇಲ್ಲದಂತೆ ಮಕ್ಕಳು ಬೆಳೆದರು. ಮಂಜುನಾಥನಿಗೆ 10 ವರ್ಷ ಆದಾಗ ಆತನ ತಂದೆ ತೀರಿ ಹೋದರು. ಇಲ್ಲಿಂದ ಅವರ ಸಂಕಷ್ಟಗಳ ಸರಮಾಲೆ ಆರಂಭವಾಯಿತು.

ಅಪ್ಪನ ಮರಣದ ನಂತರ ಮೊದಲ ಹೆಂಡತಿಯ ಮಕ್ಕಳಿಬ್ಬರು ತಮ್ಮ ಚಿಕ್ಕಪ್ಪನ ಆಶ್ರಯಕ್ಕೆ ಹೋಗಿ ಇವರಿಂದ ದೂರವಾದರು. ಬರುವ ಅಲ್ಪ ವೇತನದಲ್ಲಿ ತಾಯಿ ಮತ್ತು ಮೂರು ಜನ ಮಕ್ಕಳ ಜೀವನ ಸಾಗಬೇಕಾಗಿದ್ದು ಕುಟುಂಬ ನಿರ್ವಹಣೆ ದುಸ್ತರವಾಯಿತು.

ಹತ್ತು ವರ್ಷದ ಮಂಜುವನ್ನು ಉಚಿತವಾಗಿ ನಡೆಸುವ ತುಮಕೂರಿನ ಸಿದ್ದಗಂಗಾ ಶಾಲೆಗೆ ಕಳುಹಿಸಲಾಯಿತು. ರಜಾ ದಿನಗಳಲ್ಲಿ ಮನೆಗೆ ಬರುತ್ತಿದ್ದ ಮಂಜು ಮೆಡಿಕಲ್ ಶಾಪುಗಳಲ್ಲಿ ಕೆಲಸ ಮಾಡಿ ತಾಯಿಗೆ ಸಹಾಯ ಮಾಡುತ್ತಿದ್ದನು.ಮಂಜು ಹತ್ತನೇ ತರಗತಿಯನ್ನು ಪ್ರಥಮ ಶ್ರೇಣಿಯಲ್ಲಿ ಪಾಸಾಗಿ ಶ್ರೀ ಕೊತ್ತಲ ಬಸವೇಶ್ವರ ಸೇಡಂ ನವರು ಕೊಡ ಮಾಡುತ್ತಿದ್ದ ಎರಡೂವರೆ ಸಾವಿರ ರೂಗಳ ಸ್ಕಾಲರ್ಶಿಪ್ ಅನ್ನು ಪಡೆದನು. ಮೊದಲ ಬಾರಿಗೆ ತಾಯಿಯೊಂದಿಗೆ ಹೋಗಿ ತನ್ನ ಬಹುಮಾನದ ಹಣದಲ್ಲಿ ಒಂದು ಸೆಕೆಂಡ್ ಹ್ಯಾಂಡ್ ಸೈಕಲ್ ಖರೀದಿಸಿದ ಮಂಜು ರಸ್ತೆ ಬದಿಯಲ್ಲಿ ಮಾರಾಟ ಮಾಡುತ್ತಿದ್ದ ಶರಟುಗಳನ್ನು ಖರೀದಿಸಿ ಉಳಿದ ಹಣವನ್ನು ಮನೆಯ ಖರ್ಚಿಗೆ ಬಳಸಲು ತಾಯಿಗೆ ನೀಡಿದನು.



ನಂತರ ತಾವು ವಾಸವಾಗಿರುವ ಭಾಗ್ಯನಗರದಲ್ಲಿಯೇ 2005 ರಲ್ಲಿ ವಾಣಿಜ್ಯ ವಿಭಾಗವನ್ನು ಆಯ್ದುಕೊಂಡು ಪಿಯು ತರಗತಿಗೆ ಅಡ್ಮಿಶನ್ ಮಾಡಿಸಿದ ಮಂಜು ಬೆಳಗಿನ ಜಾವ ಬೇಗನೆ ಎದ್ದು ಹಾಲಿನ ಪ್ಯಾಕೆಟ್ ಗಳನ್ನು ಮನೆ ಮನೆಗೆ ತಲುಪಿಸಿ ಬಂದು ಮತ್ತೆ ಕೊಂಚ ಹೊತ್ತು ಮಲಗಿ ಕಾಲೇಜಿಗೆ ಹೋಗುತ್ತಿದ್ದನು. ಮತ್ತೆ ಮಧ್ಯಾಹ್ನದ ಊಟದ ನಂತರ ಕುಟುಂಬ ನಿರ್ವಹಣೆಗಾಗಿ ತಾಯಿ ಮತ್ತು ಅಜ್ಜಿ ಸೇರಿ ಮಾಡುತ್ತಿದ್ದ ಖಡಕ್ ರೊಟ್ಟಿಗಳನ್ನು ಡಾಬಾಗಳಿಗೆ ಹೋಟೆಲುಗಳಿಗೆ ತನ್ನ ಸೈಕಲ್ನಲ್ಲಿ ಹೋಗಿ ಕೊಟ್ಟು ಬರುತ್ತಿದ್ದ.

ಮುಂದೆ 2007 ರಲ್ಲಿ ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ಕಾಲೇಜಿಗೆ ಬಿ.ಕಾಂ. ಪದವಿ ತರಗತಿಗೆ ಅಡ್ಮಿಶನ್ ಮಾಡಿಸಿದ ಮಂಜು ಮುಂಜಾನೆಯ ಕಾಲೇಜು ಅವಧಿಯ ನಂತರ ಮಧ್ಯಾಹ್ನದ ಮೇಲೆ ಮೆಡಿಕಲ್ ಶಾಪ್ ನಲ್ಲಿ ಕೆಲಸ ಮಾಡಿ ಕುಟುಂಬಕ್ಕೆ ಸಹಾಯ ಮಾಡುತ್ತಿದ್ದನು. ಈ ಮಧ್ಯದಲ್ಲಿ ಓದನ್ನು ನಿಲ್ಲಿಸಿದ್ದ ತಮ್ಮನಿಗಾಗಿ ತಾಯಿ ಬ್ಯಾಂಕ್ನ ಹಣಕಾಸು ಸಹಾಯದಿಂದ ಕಂತಿನಲ್ಲಿ ಖರೀದಿಸಿದ್ದ ಆಟೋ- ರಿಕ್ಷಾ ವನ್ನುಕೂಡ ಸುಮಾರು ಆರು ತಿಂಗಳ ಕಾಲ ಚಲಾಯಿಸಿದ ಮಂಜುನಾಥ್.

ಬಿ ಕಾಮ್ ಮುಗಿದ ನಂತರ 2010ರಲ್ಲಿ ಹುಬ್ಬಳ್ಳಿಯ ಫೈನಾನ್ಸ್ ಒಂದರಲ್ಲಿ ಎರಡು ವರ್ಷಗಳ ಕಾಲ ಕಾರ್ಯನಿರ್ವಹಿಸಿದ ಮಂಜು ಮತ್ತೆ ಕೊಪ್ಪಳಕ್ಕೆ ಮರಳಿದನು. ಕಾರ್ ಶೋರೂಮ್ ಒಂದರಲ್ಲಿ ಸೇಲ್ಸ್ ಎಕ್ಸಿಕ್ಯೂಟಿವ್ ಆಗಿ ಸೇರಿಕೊಂಡ ಮಂಜುಗೆ 2013ರಲ್ಲಿ ಕುಟುಂಬದ ಆರ್ಥಿಕ ಪರಿಸ್ಥಿತಿ ಅಷ್ಟೇನೂ ಉತ್ತಮವಾಗಿಲ್ಲದ ಕಾರಣ ಗಂಗಾವತಿಯಲ್ಲಿ ನಡೆದ ಸಾಮೂಹಿಕ ವಿವಾಹದಲ್ಲಿ ಮಾಡಲಾಯಿತು.

2014ರಲ್ಲಿ ಓರ್ವ ಪುತ್ರಿಯನ್ನು ಪಡೆದ ಮಂಜುವಿನ ಆರ್ಥಿಕ ಪರಿಸ್ಥಿತಿ ಕೊಂಚ ಉತ್ತಮಗೊಂಡಿದ್ದರೂ ಮಾಡಬೇಕಾದ ಕರ್ತವ್ಯಗಳು ಸಾಕಷ್ಟಿದ್ದವು.

ಇದೇ ಸಮಯದಲ್ಲಿ ಮಂಜು ವಾಟ್ಸಪ್ ನಲ್ಲಿ ಆರಂಭಿಸಿದ ರಕ್ತದಾನಿಗಳ ಗುಂಪು ಸಾಕಷ್ಟು ಜನ ಗರ್ಭಿಣಿ ಮಹಿಳೆಯ- ರಿಗೆ, ಅಪಘಾತ ಪೀಡಿತರಿಗೆ ತುರ್ತು ರಕ್ತದ ಪುರೈಕೆಯನ್ನು ಆರಂಭಿಸಿ ಕೇವಲ ಎರಡು ಮೂರು ವರ್ಷಗಳಲ್ಲಿ ನೂರಾರು ಜನರ ಪ್ರಾಣ ಉಳಿಸಿತು. ಕ್ರಮೇಣ ಈ ವಿಷಯ ಸಾಮಾಜಿಕ ಜಾಲತಾಣಗಳ ಮೂಲಕ ಎಲ್ಲೆಡೆ ಹರಡಿ ರಾಜ್ಯಾದ್ಯಂತ ಮಂಜುವನ್ನು ಗುರುತಿಸಿ ಗೌರವಿಸಲಾಯಿತು.

ಗಣ್ಯ ವ್ಯಕ್ತಿಯೊಬ್ಬರಿಗೆ ಟ್ಯಾಕ್ಸಿ ಚಾಲಕನಾಗಿ ಕಾರ್ಯನಿರ್ವಹಿಸಲು ಆರಂಭಿಸಿದ ಮಂಜುವಿನ ಏಳಿಗೆ ಮತ್ತು ಸಾಮಾಜಿಕ ಪ್ರಸಿದ್ಧಿಯನ್ನು ಸಹಿಸಲಾರದ ಕೆಲ ಜನರು ಆತನ ಕುರಿತು ಅಪಪ್ರಚಾರ ಮಾಡಲಾರಂಭಿಸಿದಾಗ ಬಹಳಷ್ಟು ನೊಂದುಕೊಂಡ ಮಂಜು ಆತ್ಮಹತ್ಯೆಗೂ ಮನಸ್ಸು ಮಾಡಿದ್ದ. ಆ ಸಮಯದಲ್ಲಿ ಆತನ ಬೆನ್ನಿಗೆ ನಿಂತ ಕೆಲ ಆಪ್ತರು ಜನರ ಬಾಯಿಯನ್ನು ಮುಚ್ಚಿಸಲು ಸಾಧ್ಯವಿಲ್ಲ, ನೀನು ಮಾಡುತ್ತಿರುವ ಒಳ್ಳೆಯ ಕೆಲಸಗಳನ್ನು ಮುಂದುವರೆಸಿಕೊಂಡು ಹೋಗು ಎಂದು ಒತ್ತಾಸೆಯಾಗಿ ನಿಂತು ಮಂಜುವಿನ ಆತ್ಮಬಲವನ್ನು ಹೆಚ್ಚಿಸಿದರು.

ಹಂತ ಹಂತವಾಗಿ ಒಂದೊಂದೇ ಕೆಲಸಗಳನ್ನು ನಿರ್ವಹಿಸುತ್ತಾ ಅಂತಿಮವಾಗಿ ಮೊದಲ ಬಾರಿ ಡಿಜಿಟಲ್ ಮಾಧ್ಯಮದ ಯೂಟ್ಯೂಬ್ ಚಾನೆಲ್ ಆದ ಕನ್ನಡ ಚಾನೆಲ್ ಮಾಧ್ಯಮ ವರದಿಗಾರನಾಗಿ ಪವಾಡ ಬಯಲುಗಾರರಾದ ಹುಲಿಕಲ್ ನಟರಾಜ್, ಕನ್ನಡ ಚಲನಚಿತ್ರ ರಂಗದ ಹಿರಿಯ ನಟ ದೊಡ್ಡಣ್ಣ, ಅಂಗನವಾಡಿ ಶಾಲೆಗಳಿಗೆ ಬಣ್ಣ ಬಳಿಯಲು ತಮ್ಮ ವೇತನದ ಶೇಕಡ 10 ರಷ್ಟನ್ನು ಬಳಸುವ ಜಿಲ್ಲಾ ಪಂಚಾಯತ್ ಅಧಿಕಾರಿಯಾಗಿರುವ ಮಲ್ಲಿಕಾರ್ಜುನ ತೊದಲಬಾಗಿಯವರಂತಹ ಗಣ್ಯರನ್ನು ಸಂದರ್ಶಿಸಿರುವ ಮಂಜುನಾಥ್ ರವರು, ಸಮಾಜದ ವಿವಿಧ ಸ್ಥರಗಳಲ್ಲಿರುವ ಶ್ರೀಸಾಮಾನ್ಯರ ನೋವಿಗೆ, ತೊಂದರೆಗಳಿಗೆ ದನಿಯಾಗಿ ಕಾರ್ಯನಿರ್ವಹಿಸಿದ್ದಾರೆ. ವಿದ್ಯಾರ್ಥಿಗಳ ಭವ್ಯ ಭವಿಷ್ಯಕ್ಕೆ ನೆರವಾಗುವ ಸಮಾಜ ಪರ ಸಂಘಟನೆಗಳಿಗೆ ಧ್ವನಿಯಾಗುವ, ಸಾಮಾನ್ಯರ ತೊಂದರೆಗಳಿಗೆ ಕಿವಿಯಾಗಿ, ಸಾರ್ವಜನಿಕರಿಗೆ ಆಗುವ ತೊಂದರೆಗಳನ್ನು ಸರ್ಕಾರಕ್ಕೆ ಮುಟ್ಟಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಮಂಜುನಾಥ್ ಇಂದು ತಮ್ಮದೇ ಸ್ವಂತ ವಾಹನದಲ್ಲಿ ಸಂದರ್ಶನವನ್ನು ಕೈಗೊಳ್ಳುತ್ತಾ ಜನಪರ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಗಣ್ಯಾತಿ ಗಣ್ಯರ, ಸಾಧಕರು ಮತ್ತು ಸಮಾಜಮುಖಿ ವ್ಯಕ್ತಿಗಳನ್ನು ಸಂದರ್ಶಿಸುತ್ತಾ ಜನರ ಮತ್ತು ಅಧಿಕಾರಿಗಳ ನಡುವಿನ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಮಾಧ್ಯಮ ಕ್ಷೇತ್ರದಲ್ಲಿ ಹೆಚ್ಚಿನ ಆಸಕ್ತಿ ವಹಿಸಿ ಕಾರ್ಯನಿರ್ವಹಿಸುತ್ತಿರುವ ಮಂಜುನಾಥ್ ಅವರಿಗೆ ಸಹಜವಾಗಿಯೇ ಜೀವ ಬೆದರಿಕೆಯ ಕರೆಗಳು ಕೂಡ ಬಂದಿವೆ ಎಂದರೆ ಅವರ ದಿಟ್ಟ ಮತ್ತು ಜನಪರ ಒಲವು, ನಿಲುವುಗಳ ಕುರಿತು ನಮಗೆ ಅರಿವಾಗಬಹುದು.

ಸುವರ್ಣ ಚಾನೆಲ್ ನ ಮುಖ್ಯ ವರದಿಗಾರರಾದ ಅಜಿತ್ ಹನುಮಕ್ಕನವರ್ ಅವರಿಂದ ಪ್ರಭಾವಿತಗೊಂಡ ಮಂಜುನಾಥ್ ಅವರು ರೈತನ ಬಾಳನ್ನು ಕುರಿತ 'ಒಂಟಿಮರ' ಎಂಬ ಕಿರು ಚಿತ್ರವನ್ನು ತಯಾರಿಸಿ ಅದನ್ನು ಅಜಿತ್ ಹನುಮಕ್ಕನವರ್ ಅವರಿಂದಲೇ ಬಿಡುಗಡೆಗೊಳಿಸಿದರು.

ಸಂದರ್ಶಕರಿಗಿರಬೇಕಾದ ಚಾಕಚಕ್ಯತೆ, ಜ್ಞಾನ, ವಿಷಯದ ಕುರಿತಾದ ಸಮಗ್ರ ಮಾಹಿತಿ, ಸಮಯಪ್ರಜ್ಞೆ ಮತ್ತು ಮಾತಿನ ಮೇಲಿನ ಹಿಡಿತಗಳನ್ನು ಹೊಂದಿರುವ ಮಂಜುನಾಥ್ ಇದೀಗ ಕೊಪ್ಪಳದ ಪ್ರಮುಖ ಡಿಜಿಟಲ್ ಮಾಧ್ಯಮ ವರದಿಗಾರರಾಗಿದ್ದಾರೆ, ಆದರೂ ಕೂಡ ಇವರ ಪ್ರತಿಭೆಗೆ ತಕ್ಕ ಮನ್ನಣೆ ದೊರೆಯುತ್ತಿಲ್ಲ ಎಂಬುದು ವಿಪರ್ಯಾಸದ ಸಂಗತಿ.

ವೈಯುಕ್ತಿಕ ಬದುಕಿನಲ್ಲಿ ಸುಖಿಯಾಗಿರುವ ಇವರ ಕಾರ್ಯಗಳಿಗೆ ತಾಯಿ ಅಕ್ಕಮಹಾದೇವಿಯವರ ಪ್ರೋತ್ಸಾಹ ಮತ್ತು ಆಶೀರ್ವಾದ,ಪತ್ನಿ ಮೀನಾಕ್ಷಿಯವರ ಸಹಕಾರ ಮತ್ತು ನೆರವು ಇದ್ದು ಮಕ್ಕಳಾದ ಸೃಷ್ಟಿ ಮತ್ತು ಆಕಾಂಕ್ಷ ಅವರನ್ನು ಒಳಗೊಂಡ ಪುಟ್ಟ ಸಂಸಾರ ಇವರದು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಯೂನಿಯನ್ ಲೀಡರ್ ಆಗಿದ್ದ ತಮ್ಮ ತಂದೆಯವರ ನಾಯಕತ್ವ ಗುಣವನ್ನು ಬಳುವಳಿಯಾಗಿ ಪಡೆದುಕೊಂಡಿರುವ ಮಂಜುನಾಥ್ ಅವರ ತಾಯಿ ಅಕ್ಕಮಹಾದೇವಿ ಮತ್ತು ಅಜ್ಜಿ ಗೌರಮ್ಮ ಮಾಲಿಪಾಟೀಲ್ ರವರ ಕಷ್ಟಕರ ಜೀವನದಲ್ಲಿಯೂ ಧೈರ್ಯಗೆಡದೆ ಬದುಕು ಸಾಗಿಸಿದ ಆದರ್ಶಪ್ರಾಯ ರೀತಿಗಳು,ಬಾಲ್ಯದಲ್ಲಿ ಸಹಿಸಿದ ಕಷ್ಟನಿಷ್ಟುರಗಳು ಅವರ ಇಂದಿನ ಬೆಳವಣಿಗೆಗೆ ಕಾರಣವಾಗಿವೆ. ಈ ಹಂತದಲ್ಲಿ ಅವರು ಉಂಡ ನೋವುಗಳು, ಸಹಿಸಿದ ಅವಮಾನಗಳು ಅವರನ್ನು ಇಂದು ಯಶಸ್ಸಿನ ಮೆಟ್ಟಿಲಲ್ಲಿ ನಿಲ್ಲಿಸಿದೆ ಎಂದರೆ ತಪ್ಪಲ್ಲ.

ಇನ್ನಷ್ಟು ಜನಪರ ವರದಿಗಳು, ಸಾಧನೆಗಳ ಮತ್ತು ಸಾಧಕರ ಕುರಿತಾದ ಸಂದರ್ಶನಗಳ ಮೂಲಕ ಅವರ ಪ್ರತಿಭೆ ಬೆಳಕು ಕಾಣಲಿ. ರಾಜ್ಯ ಮತ್ತು ರಾಷ್ಟ್ರಮಟ್ಟದ ದೃಶ್ಯ ಮಾಧ್ಯಮಗಳಲ್ಲಿ ಕಾರ್ಯ ನಿರ್ವಹಿಸಬೇಕೆನ್ನುವ ಮಂಜುನಾಥ್ ಅವರ ಆಶಯ ನೆರವೇರಲಿ ಎಂದು 'ಉದಯರಶ್ಮಿ' ಹಾರೈಸುತ್ತದೆ..[7:07 PM, 9/10/2024] Bijapur Indushekhar Manur Udaya Rashmi: **

■ **ಲೇಖಕರು**

– ವೀಣಾ ಹೇಮಂತ್ ಗೌಡ ಪಾಟೀಲ್, ಮುಂಡರಗಿ – ಗದಗ

**Printed by:** AVINASH BIDARI, **Published and Onwed by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR